ಶ್ರೀ ಧರ್ಮಸಿಂಗ್ : ಸರ್ಕಾರದಿಂದ ಆಗಲಿಲ್ಲ ಎಂದರೆ ಖಾಸಗಿಯವರಿಗೆ ವಹಿಸಿಕೊಡುತ್ತೀರಾ? ಇದರ ಬಗ್ಗೆ ಮಾನ್ಯ ಮಂತ್ರಿಗಳಿಂದ ಉತ್ತರ ಬೇಕು.

ಶ್ರೀ ಧರ್ಮಸಿಂಗ್ : ಸರ್ಕಾರದಿಂದ ಆಗಲಿಲ್ಲ ಎಂದರೆ ಖಾಸಗಿಯವರಿಗೆ ವಹಿಸಿಕೊಡುತ್ತೀರಾ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಖಾಸಗಿ ಸಂಸ್ಥೆಯವರಿಗಾಗಲಿ, ಮಾನ್ಯ ರಾಯರೆಡ್ಡಿಯವರಿಗಾಗಲಿ ಏನಾದರೂ ಮಾಹಿತಿ ಸಿಕ್ಕಿದರೆ ನೀವು ನಮ್ಮ ಅಧಿಕಾರಿಗಳ ಜೊತೆ ಸಮಾಲೋಚನೆ ಮಾತಬಹುದು. ಆದರೆ ಇದನ್ನು ಖಾಸಗಿಯವರಿಗೆ ವಹಿಸಿಕೊಡತಕ್ಕ ಪ್ರಮೇಯವಿಲ್ಲ. ಇನ್ನು ಪೊಲೀಸರಿಗೆ ಹೆಲಿಕಾಪ್ಟರ್ ಕೊಡುತ್ತೀರಾ ಎಂದು ಕೇಳಿದ್ದೀರಿ. ಈಗಾಗಲೇ ನಾವು ಟಾಸ್ಕ್‌ಫೋರ್ಸ್‌ಗೆ ಹೇಳಿದ್ದೇವೆ. ನಮ್ಮ ರಾಜ್ಯ ಸರ್ಕಾರದಲ್ಲಿ ಹೆಲಿಕ್ಯಾಪ್ಟರ್ ಇದೆ. 4 ಸಾವಿರ ಚದರ ಮೈಲಿ ತಮಿಳ್ನಾಡಿನ ವ್ಯಾಪ್ತಿಯಲ್ಲಿರತಕ್ಕ ಕಾಡಿನಲ್ಲಿ ಅವನು ಅಡಗಿಕೊಂಡರೆ ಇವತ್ತು ಸರ್ಕಾರದ ಹೆಲಿಕ್ಯಾಪ್ಟರ್‌ನ್ನೂ ಕೂಡ ಉಪಯೋಗ ಮಾಡಬಹುದೆಂದು ನಾವು ಆದೇಶವನ್ನು ಕೊಟ್ಟಿದ್ದೇವೆ. ಎ.ಕೆ. 47 ಗನ್ ಇಲ್ಲ ಎಂದು ತಾವು ಹೇಳಿದ್ದೀರಿ ಇವತ್ತು ಎ.ಕೆ. 47 ರೈಫಲ್ಸ್ 10 ಕೊಟ್ಟಿದ್ದೇವೆ. 20 ಲೈಟ್ ಮೆಷಿನ್ ಗನ್ಸ್‌ನ್ನು ಕೊಟ್ಟಿದ್ದೇವೆ. 303 ರೈಫಲ್ಸ್‌ನ್ನು ಎಲ್ಲ ಪೊಲೀಸ್ ಕಾನ್‌ಸ್ಟೇಬಲ್‌ಗಳಿಗೂ ಕೊಟ್ಟಿದ್ದೇವೆ. ಅದರೂ ಕೂಡ ಬಹಳ ಆಧುನಿಕವಾದ 7.62 ರೈಫಲ್ಸ್ ಸೆಂಟ್ರಲ್ಸ್‌ನಿಂದ ಬಂದಿದೆ. ಅದಕ್ಕೆ 18 ಲಕ್ಷ ರೂ. ಬೇಕಾಗಿದ್ದುದನ್ನು ಈಗಾಗಲೇ ಕೊಟ್ಟಿದ್ದೇವೆ.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರ ವೀರಪ್ಪನ್ ವಿಚಾರದಲ್ಲಿ ಪ್ರಸ್ತಾಪ ಮಾಡಿದಾಗ ಯಾವುದೋ ಒಂದು ಪತ್ರಿಕೆಯಲ್ಲಿ ಬಂದಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಕಾಂಗ್ರೆಸ್‌ನ ಯಾರೋ ಒಬ್ಬ ಹಿರಿಯ ಸದಸ್ಯರು ಈ ರೀತಿ ಹೇಳಿಕೆ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಬಹುಶಃ ಅದು ಹಳೆಯ ವಿಚಾರ. ಈ ವಿಚಾರ ಈಗಾಗಲೇ ಪತ್ರಿಕೆಯಲ್ಲಿ ಕೂಡ ಬಂದಿದೆ. ಆ ಹಿರಿಯ ಸದಸ್ಯರು ಈಗ ಕಾಂಗ್ರೆಸ್‌ನಲ್ಲಿ ಇಲ್ಲ. ಈಗಾಗಲೇ ಅವರು ಕಾಂಗ್ರೆಸ್‌ನಿಂದ ಸಸ್ಪೆಂಡ್ ಆಗಿದ್ದಾರೆ. ಅವರು ರಾಜಕೀಯ ದುರುದ್ದೇಶದಿಂದ ನನ್ನ ಮೇಲೆ ಈ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಅವರು ಸ್ಟೇಟ್‌ಮೆಂಟನ್ನು ಕೊಟ್ಟು ಏನು ಹೇಳಿದ್ದಾರೆಂದರೆ, ನಾನು ಮಾನ್ಯ ಪ್ರಧಾನ ಮಂತ್ರಿಗಳಿಗೆ ಮತ್ತು ಮಾನ್ಯ ರಾಜ್ಯಪಾಲರಿಗೆ ಎವಿಡೆನ್ಸ್‌ನ್ನು ಕೊಡುತ್ತೇನೆಂದು ಹೇಳಿದಾಗ ನಾನು ಅದನ್ನು ಟಾಲೆಂಜ್ ಮಾಡಿದೆ. ಬಹುಶಃ 22 ವರ್ಷದಿಂದ ಮಾನ್ಯ ವಿರೋಧ ಪಕ್ಷದ ನಾಯಕರಿಗೂ ನನ್ನ ವಿಚಾರ ತಿಳಿದಿದೆ. ನಾನು ರಾಜಕೀಯ ಜೀವನದಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಸಮಾಜ ಸೇವೆಯನ್ನು ಮಾಡುತ್ತಾ ಬಂದಿದ್ದೇನೆ. ಆದರೆ, ನನ್ನ ಇಡೀ ಜೀವನದಲ್ಲೇ ಆ ವೀರಪ್ಪನ್ ಯಾರು? ಎಂಬುದು ಗೊತ್ತಿಲ್ಲ. ಅಂಥವರ ಯಾವ ಸಂಬಂಧವೂ ಕೂಡ ನನಗೆ ಇಲ್ಲ. ಬಹುಶಃ ಯಾರು ಈ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. ಅವರ ವಿಚಾರ ಪ್ರತಿಯೊಬ್ಬರಿಗೂ ಗೊತ್ತಿದೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಅವರು ಹೇಳಿದಂಥ ಸ್ಟೇಟ್‌ಮೆಂಟನ್ನು ಏನು ಒತ್ತಿ ಹೇಳಿದ್ದಾರೆ ಅವರ ಬಗ್ಗೆ ತಮ್ಮ ಹತ್ತಿರ ಏನಾದರೂ ಸಾಕ್ಷ್ಯಾಧಾರ ಇದೆಯೆ? ನಾನು ವೀರಪ್ಪನ್ ಜೊತೆಯಲ್ಲಿರತಕ್ಕದ್ದು ಅಥವಾ ಅವನಿಗೆ ಬೆಂಬಲ ಕೊಡುವ ಬಗ್ಗೆ ಇದ್ದರೆ ಅಥವಾ ಯಾರಾದರೂ ಮಾನ್ಯ ಸದಸ್ಯರು ಏನಾದರೂ ಪುರಾವೆಯನ್ನು ತಂದುಕೊಟ್ಟರೆ ನಾನು ಈ ನನ್ನ ರಾಜಕೀಯ ಜೀವನದಿಂದಲೇ ನಿವೃತ್ತನಾಗುತ್ತೇನೆ, ಮತ್ತು ಈ ಸದನವು ಯಾವ ಶಿಕ್ಷೆಯನ್ನು ಕೊಡುತ್ತದೋ ಆ ಎಲ್ಲ ಶಿಕ್ಷೆಯನ್ನೂ ಅನುಭವಿಸುವುದಕ್ಕೆ ನಾನು ತಯಾರಾಗಿದ್ದೇನೆ.

ಆದರೆ ರಾಜಕೀಯ ದುರುದ್ದೇಶದಿಂದ ಒಬ್ಬ ವ್ಯಕ್ತಿಯನ್ನು ನಿರ್ನಾಮ ಮಾಡುವ ದುರುದ್ದೇಶದಿಂದ, ಯಾವ ಯಾವ ಪಕ್ಷದಲ್ಲಿ ಹೋಗಿ ಯಾವ ಯಾವ ಪಕ್ಷಕ್ಕೆ ಕಪ್ಪೆ ಹಾರಿದಂತೆ ಹಾರಿದ ಒಬ್ಬ ವ್ಯಕ್ತಿ ಹೇಳುವಂಥ ವಿಚಾರ ದಯವಿಟ್ಟು ಈ ಒಂದು ಸದನದಲ್ಲಿ ತಾವು ಹೆಚ್ಚು ಮನ್ನಣೆ ಕೊಡಬೇಡಿ ಎಂದು ವಿರೋಧ ಪಕ್ಷದ ನಾಯಕರಿಗೆ ಮತ್ತು ಸನ್ಮಾನ್ಯ ರಾಯರೆಡ್ಡಿಯವರಿಗೆ ವಿನಂತಿ ಮಾಡುತ್ತೇನೆ.

ಚೇರ್ಮನ್ : ಈಗ ಶಾಸನಾತ್ಮಕ ನಿರ್ಣಯ ಕೆ.ಜೆ. ಜಾರ್ಜ್‌ರವರಿಂದ ಮಾನ್ಯ ನಗರಾಭಿವೃದ್ಧಿ ಸಚಿವರು.

ಶಾಸನಾತ್ಮಕ ನಿರ್ಣಯ

ವಿಷಯ : ಜನರೇ ಮಲವನ್ನೆತ್ತುವ ಅಮಾನವೀಯ ಪದ್ಧತಿಯನ್ನು ರದ್ದುಪಡಿಸುವುದು.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ ಮಲವನ್ನು ಕೈಯಿಂದ ಶುಚಿಮಾಡುವಂಥ ವಿಚಾರದಲ್ಲಿ ಮತ್ತೆ ಮಲವನ್ನು ತಲೆಯ ಮೇಲೆ ಹೊತ್ತು ಶುಚಿ ಮಾಡುವ ವಿಚಾರದಲ್ಲಿ ಇಡೀ ರಾಷ್ಟ್ರದಲ್ಲಿ ಇದನ್ನು ಬ್ಯಾನ್ ಮಾಡಲಿಕ್ಕೆ ಒಂದು ಕಾಯಿದೆಯನ್ನು ತರುತ್ತಿದ್ದಾರೆ. ಬಹುಶಃ ನಮ್ಮ ರಾಜ್ಯದಲ್ಲಿ 1973ನೇ ಇಸವಿಯಿಂದ ಇದು ಜಾರಿಗೆ ಬಂದಿದೆ. ಶ್ರೀಮಾನ್ ಬಸವಲಿಂಗಪ್ಪನವರು ಆ ಸಂದರ್ಭದಲ್ಲಿ ಮಂತ್ರಿಗಳಾಗಿದ್ದರು. ಆದರೆ ನಮ್ಮ ರಾಷ್ಟ್ರದ ಬೇರೆ ಬೇರೆ ಭಾಗಗಳಲ್ಲಿ ಇನ್ನು ಈ ಪದ್ಧತಿ ನಡೆಯುತ್ತಿರುವುದರಿಂದ ರಾಷ್ಟ್ರದಾದ್ಯಂತ ಒಂದು ಖಾಯಿದೆಯನ್ನು ಕಳುಹಿಸಿಕೊಟ್ಟಿದ್ದಾರೆ. ಬಹುಶಃ ನಾವು ಈ ರೆಸಲ್ಯೂಷನ್‌ನ್ನು ಓದುತ್ತೇನೆ. ತಾವು ಅದಕ್ಕೆ ಅಂಗೀಕಾರ ಕೊಟ್ಟು ಅದನ್ನು ಕಳುಹಿಸಿಬಿಟ್ಟರೆ, ರಾಷ್ಟ್ರಾದ್ಯಂತ ಇದು ಒಂದು ಖಾಯಿದೆ ಮಾಡುವಂಥಾದ್ದಾಗುತ್ತದೆ. ರೆಸಲ್ಯೂಷನ್ ನಾನು ಈಗಾಗಲೇ ಹೇಳಿದ್ದೇನೆ. ಮಾನ್ಯ ಬಸವಲಿಂಗಪ್ಪನವರ ಕಾಲದಲ್ಲಿ 1973ನೇ ಇಸವಿಯಲ್ಲಿ ನಮ್ಮ ರಾಜ್ಯದಲ್ಲಿ ಇದು ಜಾರಿಗೆ ಬಂದಿದೆ. ಈವತ್ತಿಗೆ ಬಹುಶಃ 14 ವರ್ಷಗಳಾದ ಮೇಲೆ ರಾಷ್ಟ್ರದಾದ್ಯಂತ ಈ ಕಾಯಿದೆಯನ್ನು ಜಾರಿಗೆ ತರಲಿಕ್ಕೆ ಕೇಂದ್ರ ಸರ್ಕಾರದವರು ಮುಂದೆ ಬಂದಿದ್ದಾರೆ. ಈ ರೆಸಲ್ಯೂಷನ್ ಈ ರೀತಿ ಇದೆ.

"WHEREAS it has been enshring in the preamble to the Constitution of India assuring the dignity of the individual;

AND WHEREAS Article 47 of the Constitution of India enshrines that the State shall raise the standard of living of its people and the improvement of public health as among its primary duties;

WHEREAS the dehumanising practice of manual seavenging of night soil still continues in many parts of the country;

AND WHEREAS the municipal bye-laws by themselves as a measure *for entire conversion of* dry latrines and construction of new pour flush latrines and prevention of further dry latrines in households are not stringent enough and do not provide any compulsion on house owners to eliminate this practice;

AND WHEREAS it is necessary to enact a uniform legislation throughout the country for abolishing manual scavenging by declaring employmen of manual scavening for any night soil an offence; and making it an offence for not individual or organisation to engage another individual for carrying the night soil and thereby ban the further proliferation of dry latrine in the country;

AND WHEREAS it is desirable for eliminating this dehumanising practice to make it obligatory for house owners to covert dry latrines into pour flush latrines or, as the case may be, to construct new such latrine in the new contrauction;

AND WHEREAS it is necessary that this shameful practice is abolished throughout the country in a time bound period;

And whereas the subject matter of such law is relatable to entry 6 of List II (Stat List) of the Seventh Schedule to the Constitution of India and Parliament has no power to make laws for the States with respect to the

aforesaid matters except as provided in Article 249 and 255 of the Constitution of India;

AND WHEREAS it appears to this Legislative Assembly to be desirable that the aforesaid matter should be regulated in the State of Karnataka by Parliament by law;

NOW, THEREFORE, in excercise of the powers coferred by clause (1) of Article 252 of the Constitution of India, this House hereby resolves that the matter of making employment of manual scavenger for removal of night soil, as punishable offence from a date to be specified by the State Government and all matters connected herewith ancillary an incidental thereto should be regulated in the State of Karnataka by Parliament by Law".

ಟೇರ್‌ಮನ್ : ಪ್ರಸ್ತಾವವನ್ನು ಮಂಡಿಸಲಾಯಿತು.

+ ಶ್ರೀ ಡಿ.ಬಿ. ಚಂದ್ರೇಗಾಡ (ವಿರೋಧ ಪಕ್ಷದ ನಾಯಕರು) ;– ಮಾನ್ಯ ಅದಕ್ಷಣಿಯವರೆ, ಈ ಒಂದು ಠರಾವನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ. ತಡವಾಗಿಯಾದರೂ ಕೇಂದ್ರ ಸರ್ಕಾರಕ್ಕೆ ಎಚ್ಚರವಾದದ್ದು ಬಹಳ ಸಂತೋಷದ ವಿಚಾರ. ಕರ್ನಾಟಕದ ಶಾಸನಸಭೆಗೆ ಇದು ಬಂದಿದೆ. ಬಹಳ ಹಿಂದೆ ಅಂದರೆ ಸುಮಾರು 18–19 ವರ್ಷಗಳ ಹಿಂದೆ ಮಾನ್ಯ ಬಸವಲಿಂಗಪ್ಪನವರು ಈ ರಾಜ್ಯದ ಪಾರಾಡಳಿತ ಮಂತ್ರಿಗಳಾಗಿದ್ದಾಗ ಪ್ರಥಮಭಾರಿಗೆ ರಾಜ್ಯಕ್ಕೆ, ರಾಷ್ಟ್ರಕ್ಕೆ ಒಂದು ದೃಷ್ಟಿಯಿಂದ ಮಾರ್ಗದರ್ಶನ ಮಾಡಿದರು. ಇದರ ಅವಶ್ಯಕತೆ ಎನೆಂದು ಹೇಳಿದರು. ಅವರನ್ನು ನಾನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಇಷ್ಟೆಲ್ಲ ರಾಜ್ಯದಲ್ಲಿ ಆಗಿದ್ದರೂ ಈಗ ರಾಜ್ಯಾಂಗದತ್ತವಾಗಿ 7ನೇ ಶೆಡ್ಯೂಲ್‌ನಲ್ಲಿ ಇದು ಸೇರಬೇಕೆಂಬ ದೃಷ್ಟಿಯಿಂದ ಈ ಠರಾವನ್ನು ಮಂಡನೆ ಮಾಡಿದ್ದೀರಿ; ಇದನ್ನು ನಾನು ಸ್ವಾಗತಿಸುತ್ತೇನೆ ಮತ್ತು ಅತಿ ಶೀಘ್ರವಾಗಿ ಇಂಥ ಶಾಸನ ನಮ್ಮ ಸಂಸತ್ತಿನಲ್ಲಿ ಅಂಗೀಕಾರವಾಗಿ ರಾಜ್ಯಾಂಗದ ಅವಿಭಾಜ್ಯ ಅಂಗವಾಗಿ, ದೇಶದ ಕಳಂಕ ಎನಿದೆ ಆ ಕಳಂಕದಿಂದ ಒಟ್ಟು ಮನುಕುಲ ಮುಕ್ತವಾಗಲಿ ಎಂದು ಹಾರೈಸುತ್ತೇನೆ, ಇದು ಒಂದು ದೃಷ್ಟಿಯಿಂದ ಹ್ಯೂಮನ್ ಡಿಗ್ನಿಟಿ, ಮನುಷ್ಯನ ಗೌರವದ ಪ್ರತಿಷ್ಠೆಯ ಪ್ರಶ್ನೆ. ಸ್ವತಂತ್ರ ಭಾರತದಲ್ಲಿ ಇಂಥ ಶಾಸನಗಳನ್ನು, ರೆಸಲ್ಯೂಷನ್ ಗಳನ್ನು ಮಾಡಬೇಕಾಗಿ ಬಂತಲ್ಲ ಎಂದು ಸಂಕಟವಾಗುತ್ತದೆ ಇಲ್ಲಿರತಕ್ಕ ಪರಿಸ್ಥಿತಿ ನೋಡಿದರೆ. ಆದರೂ ಸಂಸತ್ತು ಇದನ್ನು ಗಮನಿಸಿ ಶೆಡ್ಯೂಲ್‌ನಲ್ಲ ಸೇರಿಸತಕ್ಕ ಕಾರ್ಯ ಮಾಡಿದೆ. ಅದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿ ಈ ಠರಾವನ್ನು ಏನು ಪಾರಾಡಳಿತ ಮಂತ್ರಿಗಳು ಮಂಡನೆ ಮಾಡಿದ್ದಾರೆ ಅದನ್ನು ಯಾವುದೇ ಚರ್ಚೆ ಇಲ್ಲದೆ ಒಟ್ಟಾರೆ ಸರ್ವಾನುಮತದಿಂದ ಒಪ್ಪಿಕೊಳ್ಳಬಹುದೆಂದು ಸಲಹೆ ಮಾಡುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಕೇಂದ್ರ ಸರ್ಕಾರಕ್ಕೆ ಇಂಥ ಕ್ರಾಂತಿಕಾರಕವಾದ ವಿಚಾರ ಬಹಳ ತಡವಾಗಿ ಬಂದಿದೆ. ತಮಗೆ ಹೇಳುವುದಾದರೆ ಇದೇ ಶಾಸನಸಭೆಯಲ್ಲಿ ಈ ಒಂದು ವಿಚಾರದ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಯಿತು. ಮನುಷ್ಯತ್ವ, ಮನುಷ್ಯ, ಮನುಷ್ಯನ ಜೀವನ ಇದೆಲ್ಲವನ್ನು ಚಿಂತನೆ ಮಾಡಿ ಆಗ ಪಾರಾಡಳಿತ ಸಚಿವರಾದದ ಶ್ರೀ ಬಸವಲಿಂಗಪ್ಪನವರು ಈ ಸದನದಲ್ಲಿ ದೊಡ್ಡ ಕ್ರಾಂತಿಕಾರಕ ಭಾಷಣ ಮಾಡಿದ್ದಾರೆ. ಮಲಹೊನ್ನು ತಲೆ ಮೇಲೆ ಹೊತ್ತರೆ ಪರಿಸ್ಥಿತಿ ಏನೆಂಬ ಚಿತ್ರವನ್ನು ಈ ಸದನದಲ್ಲಿ ಕೊಟ್ಟದ್ದು ನನಗೆ ಇನ್ನೂ ಜ್ಞಾಪಕವಿದೆ. ಯಾವರೀತಿ ಅದು ಇರುತ್ತದೆ? ತಲೆಯ ಮೇಲೆ ಬುಟ್ಟಿ ಹೊತ್ತು ಮೈಮೇಲೆಲ್ಲಾ ಅದು ಬಿದ್ದರೆ ಆ ಮನುಷ್ಯನ ಚಿತ್ರ ಏನು? ಅವನು ಮನುಷ್ಯನೇ ಅಲ್ಲವೇ. ಯಾವರೀತಿ ಅವನ ಮನುಷ್ಯತ್ವ ಎಂಬುದನ್ನು ಒಂದು ಸುದೀರ್ಘವಾದ ವಿವರಣೆ ಈ ಸಭೆಯಲ್ಲಿ ಕೊಟ್ಟಿದ್ದು ನನಗೆ ಜ್ಞಾಪಕ ಇದೆ. ನಾವು ಅದರ ಹೆಸರು ಹೇಳಿದರೆ ಮೂಗು ಮುಚ್ಚಿಕೊಳ್ಳುತ್ತೇವೆ. ಆದರೆ ಅದನ್ನು ಹೊರಬೇಕಲ್ಲ ಅವನ ಪರಿಸ್ಥಿತಿ ಏನು? ಮನುಷ್ಯನ ಜೀವ, ರಕ್ತ, ಚರ್ಮ ಎಲ್ಲಾ ಒಂದೇ. ಆದರೆ ಈ ವ್ಯವಸ್ಥೆ ಇದೆಯಲ್ಲ ಇದು

ಕೇವಲ ಕೆಲವರಿಗೆ ಸೇರಿದ್ದು ಇದು ಹೊರತಕ್ಕದ್ದು ಎಂಬುದು ಒಂದು. ಎರಡನೆಯದು ಈ ಸಮಾಜದಲ್ಲಿ ಈ ಯುಗದಲ್ಲೂ ಸಹ ಈ ಮಲವನ್ನು ತಲೆಯ ಮೇಲೆ ಹೊರತಕ್ಕದ್ದು ಇದೆಯಲ್ಲ ಇದಕ್ಕಿಂತ ಪಾಪದ ಕೆಲಸ ಬಹುಶಃ ಎಲ್ಲೂ ಜಗತ್ತಿನಲ್ಲಿಲ್ಲ. ಆದರೆ ಇದನ್ನು ಪ್ರಪ್ರಥಮವಾಗಿ ಗುರುತಿಸಿ ಈ ರಾಜ್ಯದ ಶಾಸನಸಭೆಯಲ್ಲಿ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂಬ ತೀವ್ರವಾದ ಪ್ರಯತ್ನದಲ್ಲಿ ಹೊರಟಿಂಥ ಕೀರ್ತಿ ಶ್ರೀಮಾನ್ ಬಸವಲಿಂಗಪ್ಪನವರಿಗೆ ಸಲ್ಲಬೇಕೆಂಬುದನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಾನು ಇವತ್ತು ತಮಗೆ ಹೇಳುತ್ತಿದ್ದೇನೆ, ಇಷ್ಟಾಗಿದ್ದರೂ ಸಹ ಅನೇಕ ಕಡೆಗಳಲ್ಲಿ ಇದು ನಿಂತಿಲ್ಲ. ಇದನ್ನು ಗಮನಿಸಬೇಕಾಗಿದೆ. ಅನೇಕ ಕೆಲವು ಜಾಗ ಇಲ್ಲದೇ ಇರತಕ್ಕ ಕೆಲವು ಭಾಗಗಳಿವೆ. ಬೆಂಗಳೂರಿನಲ್ಲಿ ಕೆಲವು ಭಾಗಗಳಿವೆ. ಅನೇಕ ಕಡೆ ನಾವು ನೋಡಿದಾಗ ನನಗನಿಸುತ್ತದೆ, ಈ ಪದ್ಧತಿ, ಈ ವ್ಯವಸ್ಥೆ ಇನ್ನೂ ಇದೆ. ಅದಕ್ಕೆ ಕಾರಣ ಬೇಕಾದಷ್ಟು ಇದೆ. ಸರ್ಕಾರವೇ ಅದಕ್ಕೊಂದು ವಿಶೇಷವಾದ ಯೋಜನೆಯನ್ನು ಮಾಡಬೇಕು. ಈ ಯೋಜನೆಯ ಅಡಿಯಲ್ಲಿ ಇದನ್ನು ತರಬೇಕು. ಈ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇದರಲ್ಲಿ ಎರಡು ವಿಧ ಇದೆ. ಹಳ್ಳಿಗಳಲ್ಲಿ ಮಲಮೂತ್ರಗಳ ವಿಸರ್ಜನೆಗೆ ಸರಿಯಾದ ಜಾಗ ಇಲ್ಲ. ತಮಗೆ ಗೊತ್ತಿದೆ, ಅನೇಕ ಹಳ್ಳಿಗಳನ್ನು ನೋಡಿದ್ದೇನೆ. ಮಹಿಳೆಯರು ಸಂಜೆ ಆರು ಘಂಟೆ ಏಳು ಘಂಟೆ ಆದಮೇಲೆ ಕತ್ತಲಲ್ಲಿ ಹೋಗಿ ಬೇಲಿ ಪಕ್ಕದಲ್ಲಿ ಇವತ್ತೂ ಕೂಡ ಕುಳಿತುಕೊಳ್ಳಬೇಕಾಗಿದೆ. ಕರ್ನಾಟಕ ಒಂದೇ ಅಲ್ಲ. ದೇಶದ ಉದ್ದಗಲಕ್ಕೂ ಇದೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದರೂ ಈ ದೇಶದ ಮಹಿಳೆಯರಿಗೆ ಈ ವಿಚಾರದಲ್ಲಿ ಸ್ವಾತಂತ್ರ್ಯ ಇಲ್ಲ. ತಮಗೆ ಹೇಳುತ್ತೇನೆ, ಹಗಲು ಹೊತ್ತು ಹೋಗುವಹಾಗಿಲ್ಲ. ರಾತ್ರಿ ಕಾಯಬೇಕು. ಕತ್ತಲಾಗಬೇಕು. ಆಮೇಲೆ ಬೇಲಿ ಪಕ್ಕದಲ್ಲಿ ಹೋಗಬೇಕು. ಈ ಒಳಚರಂಡಿ ವ್ಯವಸ್ಥೆ ನೀರಿನ ವ್ಯವಸ್ಥೆ ಪ್ರತಿ ಹಳ್ಳಿಯಲ್ಲೂ ಸರಿಹೋಗಬೇಕು. ಸರಿಹೋಗಿ ಶೌಚಾಸ್ಥಳಗಳು ಇರಬೇಕು. ನೀವು ಆಹಾರ ಕೊಡುವುದಕ್ಕಾಗಲಿಲ್ಲ. ಸರಿಯಾದ ಮನೆ ಕೊಡುವುದಕ್ಕಾಗಲಿಲ್ಲ, ಕನಿಷ್ಠ ಶೌಚ ಸ್ಥಳಗಳನ್ನಾದರೂ ತಾವು ವ್ಯವಸ್ಥೆ ಮಾಡಿ ಈ ಅನಿಷ್ಟ ಪದ್ಧತಿ ಹೋಗಲಾಡಿಸಲು ತೀರ್ಮಾನಕ್ಕೆ ಬರಬೇಕಾದುದು ಕರ್ತವ್ಯ. ಅಧ್ಯಕ್ಷರೆ ತಮ್ಮ ಮೂಲಕ ನಾನು ಈ ಅತ್ಯಂತ ಕ್ರಾಂತಿಕಾರಕವಾದ ಈ ನಿರ್ಣಯವನ್ನು ನಾನು ಅಭಿಮಾನದಿಂದ ಸ್ವಾಗತಿಸುತ್ತೇನೆ. ಈ ನಿರ್ಣಯ ಸಂಪೂರ್ಣವಾಗಿ ಸರ್ವಾನುಮತದಿಂದ ಆಗಲಿ, ಮತ್ತೆ ನನಗನಿಸುತ್ತದೆ ಶ್ರೀಮಾನ್ ಬಸವಲಿಂಗಪ್ಪನವರು ಈ ಬಗ್ಗೆ ಅನೇಕ ವಿಚಾರಗಳನ್ನು ಇಟ್ಟುಕೊಂಡಿದ್ದಾರೆ. ಅದು ಚರ್ಚೆಯೂ ಆಯಿತು. ಇದು ಶಾಸನಸಭೆಯಲ್ಲಿ ಅಷ್ಟೇ ಅಲ್ಲ. ಇಡೀ ರಾಜ್ಯದ ಅನೇಕ ಕಡೆ ಪರ ವಿರೋಧ ಚರ್ಚೆಗಳು ಆದವು. ಅನೇಕ ಜನರು ಬಸವಲಿಂಗಪ್ಪನವರನ್ನು ಕೆಲವು ವಿಚಾರದಲ್ಲಿ ಟೀಕೆ ಮಾಡಿದ್ದುಂಟು. ಇಂಥ ಅನೇಕ ಕ್ರಾಂತಿಕಾರಕ ವಿಚಾರ ತರುವಾಗ ಅವರು ಟೀಕೆಗೆ ಒಳಗಾಗಿರುವುದು ಉಂಟು. ಆದರೆ ಟೀಕೆಯನ್ನು ಲೆಕ್ಕಿಸದೆ ಧೈರ್ಯವಾಗಿ ಹೇಳತಕ್ಕ ಮಾತುಗಳನ್ನು ಆ ಸಂದರ್ಭದಲ್ಲಿ ಹೇಳಿದ್ದಾರೆ. ಈ ಪರಿಸ್ಥಿತಿ ಹಳೆಯದು. 1973ರಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರಪ್ರಥಮವಾಗಿ ಈ ಅನಿಷ್ಟ ಪದ್ಧತಿ ಹೋಗಬೇಕು ಎಂದು ತಂದಂಥ ಕೀರ್ತಿ ಶ್ರೀಮಾನ್ ಬಸವಲಿಂಗಪ್ಪನವರಿಗೆ ಸಲ್ಲಬೇಕು. ಎಂದು ಮತ್ತೊಮ್ಮೆ ಹೇಳುತ್ತಾ ಇವತ್ತು ಈ ಒಂದು ನಿರ್ಣಯವನ್ನು ಸರ್ವಾನುಮತದಿಂದ ಒಪ್ಪೋಣ. ಇದಕ್ಕೆ ನನ್ನ ಸಂಪೂರ್ಣವಾದ ಸ್ವಾಗತ ಇದೆ. ಈ ಕಾರ್ಯಕ್ರಮ ಯಶಸ್ವಿ ಆಗಬೇಕಾದರೆ ಪಾರಾಡಳಿತ ಸಚಿವರು ಇದರ ಬಗ್ಗೆ ಸ್ವಲ್ಪ ತೀವ್ರ ಗಮನ ಹರಿಸಬೇಕು. ಅವರ ಇಲಾಖೆಗೆ ಸೇರಿರತಕ್ಕ ನಗರ ಪ್ರದೇಶಗಳ ಅನೇಕ ಬಡಾವಣೆಗಳಲ್ಲಿ ಹಿಂದುಳಿದಿರತಕ್ಕ ಬಡಾವಣೆಗಳಲ್ಲಿ ಇನ್ನೂ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ .ಇವತ್ತು ಗೂಡು ಇದೆ. ಅದರಲ್ಲಿ ಬುಟ್ಟಿ ಇಟ್ಟಿರುತ್ತಾರೆ. ಆ ಬುಟ್ಟಿಯನ್ನು ಎಳೆದುಕೊಂಡು ಹೊರಗೆ ಬರುವುದು ಕೆಲವು ಕಡೆ ಇದೆ; ನಾನು ನೋಡಿದ್ದೇನೆ. ಬಾಪೂಜಿ ನಗರ, ಜಗಜ್ಜೀವನ ರಾಮ್ ನಗರ, ನೋಡಿ ಎಂಥೆಂಥ ಮಹಾ ನಾಯಕರ ಹೆಸರು ಇಟ್ಟಿದ್ದೇವೆ. ಬಾಪೂಜಿನಗರ, ಮಹಾತ್ಮ ಗಾಂಧಿಯವರ ಹೆಸರಿಟ್ಟಿದ್ದೇವೆ. ಜಗಜೀವನರಾಂ ನಗರ, ಈ ದೇಶದ ಮಹಾ ವ್ಯಕ್ತಿ. ಹೆಸರನ್ನು ಇಟ್ಟಿದ್ದೇವೆ. ಅಲ್ಲಿ ಒಳಗಡೆ ಹೋದರೆ ಒಳಚರಂಡಿ ವ್ಯವಸ್ಥೆ ಕೊಡದೆ, ಇಂಥ ಅನಿಷ್ಟ ಪದ್ಧತಿ ಇದೆ. ಇದು ನೋಡಿದಾಗ ಬಹಳ ನೋವಾಗುತ್ತದೆ. ಇನ್ನೂ ಕ್ರಾಂತಿಕಾರಕವಾಗಿ ಮಾತನಾಡುವುದಾದರೆ ಕಸ ಗುಡಿಸತಕ್ಕದ್ದು. ಶೌಚಾಲಯ

ತೊಳೆಯತಕ್ಕದ್ದು ಕೆಲವರಿಗೇ ಆಗಿಹೋಗಿದೆ. ಅವರೇ ಬರಬೇಕು. ಅವರೇ ತೊಳೆಯಬೇಕು. ಮಿಕ್ಕವರು ಯಾರು ತೊಳೆಯಬಾರದು ಎಂದು. ಮಹಾತ್ಮ ಗಾಂಧಿಜಿಯವರು ತಮ್ಮ ಶೌಚವನ್ನು ತಾವೇ ತೊಳೆದುಕೊಳ್ಳುತ್ತಿದ್ದರು, ಆ ಆದರ್ಶ ಯೂರಿಗಿದೆ? ಇಂಥ ವರ್ಗದವರೇ ತೊಳೆಯಬೇಕು, ಅವರೇ ಕಸ ಹೊಡೆಯಬೇಕು ಎಂದು ಇದೆ. ಈ ಪದ್ಧತಿ ಹೋಗಬೇಕು.

ನಿಮಗೆ ಹೇಳುವುದಾದರೆ. ಪೌರ ಕಾರ್ಮಿಕರು ಎಂದು ನಿಮ್ಮ ಕಾಲದಲ್ಲಿ ಹೆಸರು ಬದಲಾವಣೆ ಆಯಿತು. ಅದು ಒಂದು ಕ್ರಾಂತಿಕಾರಕವಾದ ವಿಚಾರ. ಅವರನ್ನು ಕರೀತಿದ್ದ ಭಾಷೆಯನ್ನು ನಾವು ಇಲ್ಲಿ ಉಪಯೋಗಿಸುವುದಕ್ಕೆ ಹೋಗುವುದಿಲ್ಲ, ಆ ಭಾಷೆ ಬಿಟ್ಟು ಪೌರಕಾರ್ಮಿಕರ ಎಂದು ಹೊಸ ಲೇಬಲ್ ಕೊಟ್ಟಿದ್ದೇವೆ . ಅದರೆ ಪೌರ ಕಾರ್ಮಿಕರ ಅದೇ ಕೆಲಸವನ್ನು ಕೆಲವರಿಗೆ ಬೆರಳು ತೋರಿಸಿ ಮಾಡತಕ್ಕ ವಿಧಾನ ಬೇಡ, ಅದನ್ನು ಯಾರು ಬೇಕಾದರೂ ಮಾಡಬಹುದು. ಚೊಕ್ಕಟ ಮಾಡತಕ್ಕ ಕೆಲಸ ಕೆಲವರಿಗೆ ಸೇರಿದ್ದು ಮಾತ್ರ ಅಲ್ಲ, ಆ ಕೆಲಸ ಅವರಿಗೇ ಎಂದು ಹೇಳಲು ಹೋಗಬಾರದು. ಪೌರಾಡಳಿತ ಸಚಿವರು ಚಿಂತನೆ ಮಾಡಿ ಈ ಒಂದು ಕೆಟ್ಟ ಪದ್ಧತಿ, ಅನಿಷ್ಟ ಪದ್ಧತಿ ಈ ಯುಗದಲ್ಲಿ ಎಲ್ಲಾ ಇಲ್ಲದ ಹಾಗೆ ತ್ವರಿತವಾಗಿ ಪ್ರಯತ್ನ ಮಾಡಿದ್ದಾರೆ. ಈ ಬಗ್ಗೆ ನಮ್ಮೆಲ್ಲರ ಸಂಪೂರ್ಣ ಪ್ರಯತ್ನ ಇದೆ ಎಂದು ಹೇಳಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಪ್ರೊ: ಎಂ, ಡಿ. ನಂಜುಂಡಸ್ವಾಮಿ : (ಧಾರವಾಡ ಗ್ರಾಮೀಣ ಕ್ಷೇತ್ರ) ಮಾನ್ಯ ಸಭಾಧ್ಯಕ್ಷಿಣಿಯವರೇ, ನಾನು ಏನೂ ಹೆಚ್ಚಿಗೆ ಮಾತನಾಡುವುದಿಲ್ಲ. ಪೌರಾಡಳಿತ ಸಚಿವರು ಮಂಡಿಸಿರುವ ನಿರ್ಣಯವನ್ನು ನಾನೇನೂ ಕ್ರಾಂತಿಕಾರಿ ಎಂದು ಕರೆಯುವುದಿಲ್ಲ. ಸಾವಿರಾರು ವರ್ಷದ ನಮ್ಮ ತಪ್ಪನ್ನು ನಾವು ತಿದ್ದಿಕೊಳ್ಳುವುದಕ್ಕೆ ತಡವಾಗಿ ಮಾಡುತ್ತಿರುವ ಒಂದು ಪ್ರಯತ್ನ ಎಂದು ಹೇಳುತ್ತೇನಷ್ಟೇ. ಆದರೂ ಇದನ್ನು ನಾನು ಸ್ವಾಗತ ಮಾಡುತ್ತೇನೆ.

+ ಶ್ರೀ ಎ.ಕೆ. ಅನಂತಕೃಷ್ಣ (ಶಿವಾಜಿನಗರ ಕ್ಷೇತ್ರ) : ಮಾನ್ಯ ಅಧ್ಯಕ್ಷಿಣಿಯವರೇ, ಇದಕ್ಕೆ ಚರ್ಚೆ ಅವಶ್ಯಕವಿಲ್ಲವೆಂದು ಈಗಾಗಲೇ ಅಭಿಪ್ರಾಯ ಬಂದಿದೆ. ಈಗಾಗಲೇ ತಿಳಿದಿರುವ ಹಾಗೆ ಮಾನ್ಯ ಬಸವಲಿಂಗಪ್ಪನವರು 1972–73ರಲ್ಲಿ ಈ ಒಂದು ಅಮಾನುಷ ಪದ್ಧತಿಯನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ಹೇಳಿ ಸತತವಾಗಿ ಹೋರಾಟದ ಒಂದು ಪ್ರಯತ್ನವನ್ನು ಮಾಡಿದರು. ನಾನು ಅವರ ಜೊತೆಯಲ್ಲಿ ಕೆಲಸ ಮಾಡಿದ್ದೇನೆ. ಆ ಸಮಯದಲ್ಲಿ ನಾನು ಮೇಯರ್ ಆಗಿದ್ದೆ. ಬೆಂಗಳೂರು ನಗರಾದ್ಯಂತ ಕೂಡಾ ತೆಗೆಯಬೇಕೆಂದು ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಯಾವ ಯಾವ ವಿಭಾಗದಲ್ಲಿ ಬಹಳ ಹಿಂದುಳಿದ ವಿಭಾಗಗಳು ಇವೆ ಅಲ್ಲಿ ತೆಗೆಯಬೇಕೆಂದು ಬಹಳ ಪ್ರಯತ್ನ ಮಾಡಿದೆವು ಅಲ್ಲಿಗೂ ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲ ಎಂದು ಹೇಳಿ ಕೆಲವು ಕಡೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ, ಇದು ಕೇವಲ ಒಂದು ಕಾನೂನಿನ ದೃಷ್ಟಿಯಲ್ಲಿ ಒಂದು ತೀರ್ಮಾನ ಮಾಡಿ ಈ ಹಳೇ ಪದ್ಧತಿ ಹೋಗುತ್ತದೆ, ಅಮಾನುಷ ಪದ್ಧತಿ ಹೋಗುತ್ತೆ ಎಂದು ಒಂದು ಭಾವನೆ ಇಟ್ಟುಕೊಂಡಿದ್ದಾರೆ ಅದು ತಪ್ಪಾಗುತ್ತೆ ಅಧ್ಯಕ್ಷರೇ. ಒತ್ತಾಯಪೂರ್ವಕವಾಗಿ ಪ್ರತಿಯೊಂದು ಮುನಿಸಿಪಾಲಿಟಿ ಕೂಡಾ ಈ ಕೆಲಸ ಸಾಧನೆ ಮಾಡುವುದಕ್ಕೆ ಸಂಪೂರ್ಣ ಪ್ರಯತ್ನ ಮಾಡಬೇಕಾಗಿದೆ. ಅದನ್ನು ಕಾರ್ಯಗತ ಮಾಡಬೇಕಾಗಿದೆ. ಅದಕ್ಕಾಗಿ ಎನು ಒಳಚರಂಡಿ ವ್ಯವಸ್ಥೆ ಇದೆ ಅದನ್ನು ಸಾಕಷ್ಟು ಯೋಜನಾಪೂರಕವಾಗಿ ಮಾಡಿದ್ದೇ ಆದರೆ ಸಾರ್ವಜನಿಕರ ಮೇಲೆ ಸಾರ್ವಜನಿಕರ ಮೇಲೆ ಒತ್ತಾಯಪೂರ್ವಕವಾಗಿ ಕಾನೂನು ಮಾಡುವುದಕ್ಕಾಗುತ್ತದೆ. ಹಾಗೆಯೇ ಒಳಚರಂಡಿ ವ್ಯವಸ್ಥೆ ಎಲ್ಲಿ ಆಗುವುದಿಲ್ಲವೋ ಅಂತಹ ಕಡೆ ಪ್ರತಿಯೊಂದು ಮನೆಯವರೂ ಕೂಡ ಈ ಸೆಪ್ಟಿಕ್ ಟ್ಯಾಂಕ್ ಎಂದು ಏನು ಮಾಡುತ್ತಾರೋ ಅದನ್ನು ಕಾನೂನು ಪ್ರಕಾರವಾಗಿ ಮಾಡಲೇಬೇಕೆಂದು ಕಟ್ಟಡಕ್ಕೆ ಲೈಸೆನ್ಸ್ ಕೊಡುವಾಗಲೇ ಈ ಕಂಡೀಷನನ್ನು ಹಾಕಬೇಕಾಗುತ್ತದೆ ಹಾಗೆ ನೂಡದೇಹೋದರೆ ಇದು ಕೇವಲ ಕಾನೂನು ಪುಸ್ತಕದಲ್ಲಿ ಇದ್ದು ಬಿಡುತ್ತದೆ. ಅದನ್ನು ಜಾರಿ ಮಾಡುವುದು ಕಷ್ಟವಾಗುತ್ತದೆ. ಇದನ್ನು ನಮ್ಮ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಯಾವುದೇ ಒಂದು ಕ್ರಾಂತಿಕಾರಕ ಬದಲಾವಣೆ ತರಬೇಕೆಂದಾಗ ಅದಕ್ಕೆ ಪ್ರಾರಂಭದಲ್ಲಿ ಸಾಕಷ್ಟು ರೆಸಿಸ್ಟೆನ್ಸ್ ಬರುತ್ತದೆ. ಈ ಸಮಾಜದಿಂದ ಬರುತ್ತದೆ. ಆ ಕೆಲಸ

ಮಾಡುವವರೂ ಕೂಡಾ ಅಷ್ಟು ಸುಲಭವಾಗಿ ಬಿಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಆ ಒಂದು ವರ್ಗದವರು ಅದರ ಮೇಲೆ ಜೀವನ ಮಾಡುತ್ತಿದ್ದಾರೆ. ಆ ಜೀವನದಿಂದ ಬೇರೆ ಜೀವನ ಮಾಡುವುದಕ್ಕೆ ನಮ್ಮ ಸಮಾಜವಾಗಲೀ ಜವಾಬ್ದಾರಿಯುತವಾದ ಮುನಿಸಿಪಾಲಿಟಿಯಾಗಲೀ ಸರ್ಕಾರವಾಗಲೀ ಮಾಡಬೇಕಾಗಿ ಬರುತ್ತದೆ. ಆ ರೀತಿಯಾಗಿ ಯೋಚನೆ ಮಾಡುವಾಗ ನನಗೆ ಇನ್ನೊಂದು ಜ್ಞಾಪಕಕ್ಕೆ ಬರುತ್ತದೆ. ಮಲವನ್ನು ಕೈಯಿಂದ ತೆಗೆದುಹಾಕೋದು, ತಲೆಯಮೇಲೆ ಇಟ್ಟುಕೊಂಡು ಹೋಗುವುದು--ಈ ಪದ್ಧತಿಯನ್ನು ನಿಲ್ಲಿಸಬೇಕು. ಅದನ್ನು ಕಾನೂನು ಪ್ರಕಾರ ಮಾಡಬೇಕು.. ಹಾಗೆ ಮಾಡಿಸಿದರೆ ಶಿಕ್ಷೆಗೆ ಗುರಿಪಡಿಸಬೇಕಾಗುತ್ತದೆ ಎನ್ನುವುದು ಸೂಕ್ತ. ಆದರೆ ನಾವು ಪಟ್ಟಣಗಳಲ್ಲಿ ಬೆಂಗಳೂರು ನಗರದಲ್ಲಿ ಒಂದು ನೋಡುತ್ತೇವೆ.

(ಶ್ರೀಮತಿ ದಮಯಂತಿ ಬೋರೇಗೌಡ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಒಂದು ಕಡೆ ಈ ಕಾನೂನಿನಿಂದ ಮಲವನ್ನು ಮನೆಗಳಿಂದ ಎತ್ತಿಹಾಕುವುದು ತಲೆಯ ಮೇಲೆ ಹೊತ್ತುಕೊಂಡು ಹೋಗುವುದು ಬೇಡವೆಂದಾಗ ಮನೆಗಳ ಅಂಡರ್‌ಗ್ರೌಂಡ್ ಚೋಕ್ ಆಗುತ್ತದೆ. ಆ ಸಮಯದಲ್ಲಿ ಬ್ಲಾಕೇಜ್ ಕೂಡ ಆಗುತ್ತದೆ ಅಂತಹ ಸಮಯದಲ್ಲಿ ಕೈಯಿಂದ ಮಾಡುತ್ತಾರೆ. ಅದಕ್ಕಾಗಿ ಕೂಡ ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ ಆಧುನಿಕ ಪದ್ಧತಿಯಲ್ಲಿ ಟಾಯ್‌ಲೆಟ್‌ನಿಂದ ಮಲಮೂತ್ರವನ್ನು ತೆಗೆಯುವಂತ ಒಂದು ಕೆಲಸ ಮಾಡಬೇಕಾಗುತ್ತದೆ. ನಮ್ಮ ನಮ್ಮ ಮನೆಗಳಲ್ಲಿ ನಾವು ನಾವೇ ಕ್ಲೀನ್ ಮಾಡಿಕೊಳ್ಳುತ್ತಿದ್ದೇವೆ. ಏಕೆಂದರೆ ಕ್ಲೀನ್ ಮಾಡುವ ಜನ ಸಿಗುವ ಹಾಗೆ ಇಲ್ಲ. ಜನರನ್ನು ನೇಮಿಸಿಕೊಳ್ಳುವುದಕ್ಕೂ ಸಾಧ್ಯವಾಗುವುದಿಲ್ಲ. ಅಂಡರ್‌ಗ್ರೌಂಡ್ ಮುಖಾಂತರ ಮನೆಯಿಂದ ಹೊರಗೆ ಬಂದು, ಕಾಂಪೌಂಡ್‌ಗೆ ಬಂದು ಕಾಂಪೌಂಡ್‌ನಿಂದ ಮೇನ್ ಡ್ರೈನೇಜ್‌ಗೆ ಹೋಗಬೇಕೆಂದರೆ ಆ ಸಮಯದಲ್ಲಿ ಆಗಿಂದಾಗ್ಗೆ ಚೋಕ್ ಆಗುತ್ತದೆ. ಅದನ್ನು ತೆಗೆಯುವಾಗ ಅದಕ್ಕೊಂದು ಆಧುನಿಕ ಪದ್ಧತಿಯನ್ನು ಅನುಸರಿಸಿಕೊಂಡು ತೆಗೆಯುವಂತಹ ಕೆಲಸವನ್ನು ಕೂಡ ಮಾಡಬೇಕು. ಅದನ್ನು ಮಾಡುವಾಗ ಕೂಡ ಕಾನೂನಿನಲ್ಲಿ ಇದನ್ನು ಅಳವಡಿಸಬೇಕೆಂದು ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ. ನಮ್ಮಲ್ಲಿ ಈ ಕೆಲಸವನ್ನು ಪೌರ ಕಾರ್ಮಿಕರು ಮಾಡುವಾಗ ಅವರಿಗೆ ಹ್ಯಾಂಡ್‌ಬ್ಲೌಸ್, ಫುಟ್‌ವೇರ್ ರಬ್ಬರ್ ಬೂಟ್ಸ್ ಕೊಡುತ್ತೇವೆ. ಅದಕ್ಕೆ ಗಮ್‌ಬೂಟ್ಸ್ ಎಂದು ಹೇಳುತ್ತಾರೆ. ಅದನ್ನು ಅವರು ಸರಿಯಾಗಿ ಉಪಯೋಗ ಮಾಡುತ್ತಿಲ್ಲ. ಹಾಗೆ ಯೂಸ್ ಮಾಡದಿರುವುದರಿಂದ ಬಹಳ ಇನ್‌ಸ್ಯಾನಿಟರಿ ಕಂಡೀಷನ್‌ನಲ್ಲಿ ಕೂಡ ಅವರು ಕೆಲಸ ಮಾಡಬೇಕಾಗುತ್ತದೆ. ಅವರಿಗೆ ಕಾಯಿಲೆಗಳು ಜಾಸ್ತಿಯಾಗುತ್ತವೆ. ಅದನ್ನು ಕೂಡ ಕಾನುನುಬದ್ಧವಾಗಿ ಎನ್‌ಫೋರ್ಸ್ ಮಾಡುವಂತಹ ಒಂದು ಪ್ರಯತ್ನವನ್ನು ಕೂಡ ನಾವು ಮಾಡಬೇಕೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ನಮ್ಮ ಸ್ನೇಹಿತರಾದ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು. ಎಲ್ಲಿ ನಮಗೆ ಅಂಡರ್‌ಗ್ರೌಂಡ್ ಡ್ರೈನೇಜ್ ಪದ್ಧತಿ ಸರಿಯಿಲ್ಲ, ಅಲ್ಲಿ ಮನೆಗಳಿಂದ ಈ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದೊಂದು ವಿಭಾಗದಲ್ಲೂ ಕೂಡ ಸುಲಭ್ ಶೌಚಾಲಯ ಎಂದು ಏನು ಹೇಳುತ್ತಿದ್ದಾರೆ, ಆ ಸುಲಭ್ ಶೌಚಾಲಯ ಬಹಳ ಎಕನಾಮಿಕ್ ಬೇಸಿಸ್ ಮೇಲೆ ಅವಶ್ಯಕವಾಗಿ ಎಲ್ಲೆಲ್ಲಿ ಬೇಕಾಗಿರುತ್ತದೆ ಅದನ್ನು ಮಾಡಿದರೂ ಕೂಡ ಮನೆಗಳಲ್ಲಿ ಟಾಯಿಲೆಟ್ ಇಲ್ಲವೆಂದರೆ ಹೊರಗಡೆ ಹೋದರೂ ಮಲಮೂತ್ರ ವಿಸರ್ಜನೆ ಮಾಡುವುದಕ್ಕೆ ಅನುಕೂಲವಾಗುತ್ತದೆ, ಆ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಮತ್ತು ಆ ಕೆಲಸವನ್ನು ಮಾಡುವುದು ನಮ್ಮ ಕರ್ತವ್ಯವಾಗುತ್ತದೆ. ಇಲ್ಲದೇ ಹೋದರೆ ಒಪನ್‌ಲೆಟ್ರಿನ್ ರಸ್ತೆಗಳ ಪಕ್ಕದಲ್ಲಿ ಪಾರ್ಕ್‌ಗಳ ಪಕ್ಕದಲ್ಲಿ ಮತ್ತೊಂದು ಕಡೆ ಎಲ್ಲ ಕಡೆ ಮಾಡುವ ಅಭ್ಯಾಸವಿದೆ. ಅದನ್ನು ತೆಗೆಯಬೇಕಾದರೂ ಪುನಃ ಅದೇ ಜನ ಆ ಕೆಲಸ ಮಾಡಬೇಕಾಗುತ್ತದೆ. ಅವರೇ ಗುಡಿಸುವವರು ಮಾಡಬೇಕಾಗಿ ಬರುತ್ತದೆ. ಅದೇ ಜನ ಹೋಗಬೇಕು ರಸ್ತೆಗಳು, ಮೈದಾನಗಳು, ಪಾರ್ಕ್‌ಗಳು ಮತ್ತು ಒಪನ್ ಡ್ರೈನೇಜ್‌ಗಳಲ್ಲಿ ಮಲಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ. ಮನೆಗಳನ್ನು ಮತ್ತು ದೊಡ್ಡ ಕಟ್ಟಡಗಳನ್ನು ಕಟ್ಟುವ ಸಮಯದಲ್ಲಿ ಆ ಕೆಲಸ ಮಾಡುವವರು ಸಣ್ಣ ಸಣ್ಣ ಗುಡಿಸಲುಗಳನ್ನು ಹಾಕಿಕೊಂಡು, ಆ ಜನರು ಗುಡಿಸಲುಗಳಲ್ಲಿ ಮಲಮೂತ್ರ ವಿಸರ್ಜನೆ ಮಾಡುವುದಕ್ಕಾಗುವುದದಿಲ್ಲ

ಅವರು ಹೊರಗಡೆ ಮಾಡಬೇಕಾಗುತ್ತದೆ. ಈ ರೀತಿಯಾಗಿ ಸ್ಲಮ್ ಮಾತ್ರವಲ್ಲ, ಮೇನ್ ಸಿಟಿ ಸೆಂಟರ್‌ಗಳಲ್ಲಿ ಈ ಕೆಲಸಗಳು ನಡೆಯುತ್ತಾ ಬರುತ್ತಿವೆ. ಅದನ್ನು ನಿಲ್ಲಿಸುವುದಕ್ಕೆ ಒಂದು ಸಮಗ್ರ ಯೋಜನೆ ಮಾಡಬೇಕು. ಯಾವ್ಯಾವ ಹಂತದಲ್ಲಿ ನಮ್ಮ ಸಮಾಜದಲ್ಲಿ ಈ ಕೆಟ್ಟ ಅಭ್ಯಾಸವಿದೆ, ಆ ಅಭ್ಯಾಸಗಳನ್ನು ನಿರ್ಮೂಲನೆ ಮಾಡುವಂತಹ ರೀತಿಯಲ್ಲಿ ಒಂದು ಸಮಗ್ರ ಕಾನೂನು ತರುವುದು ಬಹಳ ಸೂಕ್ತವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಬಸವಲಿಂಗಪ್ಪನವರು 1972–73ರಲ್ಲಿ ಈ ಬಗ್ಗೆ ಸತತ ಹೋರಾಟ ಮಾಡಿದರು. ಆಗ ಅವರು ಒಂದುರೀತಿಯ ನಗೆಪಾಟಲಿಗೆ ಗುರಿಯಾಗುವಂತಹ ಕೆಲಸ ಮಾಡಿದರು ಎಂದು ಜನ ಅಂದುಕೊಂಡರು. ನಾನು ಸಹ ಅವರ ಜೊತೆಯಲ್ಲಿ ಕೆಲಸ ಮಾಡಿದ್ದೇನೆ, ಅದು ನನಗೆ ಗೊತ್ತಿದೆ. ಈಗ ಅದು ನಮ್ಮ ಕಣ್ಮುಂದೆ ಕಾನೂನು ರೂಪದಲ್ಲಿ ಬರುತ್ತಾ ಇದೆ. ನನ್ನ ಮನಸ್ಸಿಗಂತೂ ಬಹಳ ನೆಮ್ಮದಿಯಾಗುತ್ತಿದೆ. ಇದಕ್ಕೆ ಸರ್ವಾನುಮತದ ಅಭಿಪ್ರಾಯವಿದೆಯೆಂದು ಎಲ್ಲರೂ ಕೂಡ ಹೇಳುತ್ತಿದ್ದಾರೆ. ಈಗ ಏನು ಕಾನೂನು ಬಂದಿದೆ ಅದಕ್ಕೆ ಕೇಂದ್ರ ಸರ್ಕಾರದವರು ನಮ್ಮ ಸರ್ಕಾರ ಮತ್ತು ಮಾನ್ಯಮಂತ್ರಿಗಳು ಏನಿದ್ದಾರೆ ಅವರಿಗೆ ನನ್ನ ಹೃತ್ಪೂರ್ವಕ ವಂದನೆಯನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಸಭಾಧ್ಯಕ್ಷೆಣಿಯವರೆ, ಈ ವರ್ಷ ಜನವರಿ 26ನೇ ತಾರೀಖು ಮಾನ್ಯ ಬಸವಲಿಂಗಪ್ಪನವರನ್ನು ನಾವು ನೆನಪು ಮಾಡಿಕೊಳ್ಳುವ ಸಂದರ್ಭ ಬಂದಿತ್ತು. ಅದು ಕಾಶ್ಮೀರದಲ್ಲಿ ನಾವು ಅಲ್ಲಿಗೆ ಹೋಗಿದ್ದ ಸಂದರ್ಭದಲ್ಲಿ. ನಾವು ಅವರನ್ನು ನೆನಪು ಮಾಡಿಕೊಂಡೆವು. ನಾವು ಏಕತಾಯಾತ್ರ ದೃಷ್ಟಿಯಿಂದ ಕಾಶ್ಮೀರಕ್ಕೆ ಹೋಗಿದ್ದ ಸಂದರ್ಭದಲ್ಲಿ ನಮ್ಮ ಸ್ನೇಹಿತರ ಮನೆಯ ನಾಲ್ಕನೆಯ ಮಹಡಿಯಲ್ಲಿ ನಾವು ಉಳಿದುಕೊಳ್ಳುವ ಪ್ರಯತ್ನ ನಡೆದಿತ್ತು. ಆ ಮನೆಯ ಮತ್ತು ಸುತ್ತಮುತ್ತಲಿನ ಮನೆಗಳಲ್ಲಿ ಇವತ್ತಿಗೂ ಮಲವನ್ನು ಹೊರುವ ಪದ್ಧತಿಯಿದೆ. ನಾವು ಹೋಗಿ ರಾಷ್ಟ್ರಧ್ವಜ ಹಾರಿತಸಕ್ಕಂಥ ಸಂದರ್ಭದಲ್ಲಿ ಈ ಒಂದು ಪರಿಸ್ಥಿತಿಯನ್ನು ನೋಡಿ ಅವತ್ತು ನಾವು ಸನ್ಮಾನ್ಯ ಬಸವಲಿಂಗಪ್ಪನವರು ಮಾಡಿದ ಒಂದು ಕಾರ್ಯವನ್ನು ಸ್ಮರಣೆ ಮಾಡಿಕೊಂಡೆವು. ಶ್ಲಾಘನೀಯ, ಕ್ರಾಂತಿಕಾರಕ ಹೆಜ್ಜೆಯನ್ನು ಇಟ್ಟಂಥ ವ್ಯಕ್ತಿಯೆಂದು ಆ ಸಂದರ್ಭದಲ್ಲಿ ನಾವು ನೆನಪು ಮಾಡಿಕೊಂಡೆವು. ಇಡೀ ದೇಶದಲ್ಲಿ ಅನೇಕ ಕಡೆ ದುರ್ದೈವದಿಂದ ಈ ಒಂದು ಮಲ ಹೊರುವ ಪದ್ಧತಿ ಇನ್ನೂ ಮುಂದುವರೆಯುತ್ತಿದೆ. ಯಾವುದೋ ಒಂದು ಹುಟ್ಟಿನಲ್ಲಿ ಕೆಲವು ದೋಷಗಳನ್ನು ಕಂಡು ಜಾತಿ ರೂಪದಲ್ಲಿ ಕೆಲವು ವ್ಯಕ್ತಿಗಳಿಗೆ ಮಾತ್ರ ಮೀಸಲಾಗಿಸಿ, ಈ ಒಂದು ಘೋರ, ದುಷ್ಟ ಕಾರ್ಯದಲ್ಲಿ ಅನೇಕ ಸರ್ಕಾರಗಳು ಇನ್ನೂ ಕೂಡ ಇದನ್ನೇ ಮುಂದುವರೆಸುತ್ತಿರುವುದು ತುಂಬಾ ನಾಚಿಗೇಡಿತನದ್ದು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಕೂಡ ಅನೇಕ ಗ್ರಾಮಗಳಲ್ಲಿ ಈ ಪರಿಸ್ಥಿತಿ ಇದ್ದು ಗ್ರಾಮೀಣ ಹೆಣ್ಣುಮಕ್ಕಳು, ರೈತರು, ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ಒಂದು ದಿಟ್ಟ ಹೆಜ್ಜೆಯನ್ನು ಇಡಬೇಕಾಗುತ್ತದೆ. ತುಂಬಾ ನಾಚಿಗೇಡಿತನದ ಪರಿಸ್ಥಿತಿ ಎಂದು ಗೊತ್ತಿದ್ದರೂ ಕೂಡ.

ಶ್ರೀ ಬಸವರಾಜ ರಾಯರೆಡ್ಡಿ : ಇಲ್ಲಿ ಕೂಡ ನಿಮಗೆ ರೈತರೇ ಬೇಕಾ ?

ಟರ್ಮನ್ : ಸಮಯ ಬಹಳ ಕಡಿಮೆ ಇದೆ. ದಯವಿಟ್ಟು ಇಂಟರ್‌ಪ್ಟ್ ಮಾಡಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ದಯವಿಟ್ಟು ಈ ವಿಚಾರದಲ್ಲಿ ಹಗುರವಾಗಿ ಮಾತನಾಡಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಡೀ ದೇಶದಲ್ಲೇ ಒಂದು ಮಾದರಿ ಕಾರ್ಯವನ್ನು ಕರ್ನಾಟಕ ರಾಜ್ಯಸರ್ಕಾರ ಹಮ್ಮಿಕೊಂಡಿರುವುದಕ್ಕೆ ಎಲ್ಲರೂ ಕೂಡ ಶಹಭಾಸ್‌ಗಿರಿ ಕೊಡಬೇಕಾಗುತ್ತದೆ. ನಮ್ಮ ಸರ್ಕಾರ ಈ ಕಾರ್ಯವನ್ನು ಹಮ್ಮಿಕೊಂಡಿರುವ ಈ ಸಂದರ್ಭದಲ್ಲಿ ನಾನು ಒಬ್ಬ ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತನಾಗಿ ತುಂಬು ಹೃದಯದಿಂದ ಈ ನಿರ್ಣಯವನ್ನು ಬೆಂಬಲಿಸುತ್ತಾ ಶ್ರೀಮಾನ್ ಬಸವಲಿಂಗಪ್ಪನವರು ಕೂಡ ಹಿಂದೆ ಮಾಡಿರತಕ್ಕಂಥ ಪ್ರಯತ್ನವನ್ನು ಶ್ಲಾಘನೀಯವೆಂದು ಈ ನಿರ್ಣಯದಲ್ಲಿ ಸೇರಿಸಬೇಕೆಂದು ಹೇಳಿ ಸರ್ಕಾರವನ್ನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತಾ ಈ ನಿರ್ಣಯಕ್ಕೆ ಬೆಂಬಲ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷೆಣಿಯವರೇ,

ಟೇರ್ಮನ್ : ಇದು ನಾನ್ ಕಾಂಟ್ರವರ್ಶಿಯಲ್ ಆಗಿದೆ. ಮಾನ್ಯ ಮಂತ್ರಿಗಳು ಅರ್ಜೆಂಟಾಗಿ ಡೆಲ್ಲಿಗೆ ಹೋಗಬೇಕಾಗಿದೆ.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ : ನಾನು ಶ್ರೀ ಬಂಗಾರಪ್ಪನವರಿಗೆ ಅಥರೈಸ್ ಮಾಡಿ ಹೋಗುತ್ತೇನೆ.

+ ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷಿಣಿಯವರೇ, ಇವತ್ತಿನ ದಿವಸ ಮಾನ್ಯ ಸಚಿವರು ತಂದಿರುವಂಥ ಈ ನಿರ್ಣಯವನ್ನು ನಾನು ಸ್ವಾಗತಿಸುತ್ತಾ, ನಿಜವಾಗಿ ಹಿಂದೆ 1972–73ನೇ ಇಸವಿಯಲ್ಲಿ ಸನ್ಮಾನ್ಯ ಬಸವಲಿಂಗಪ್ಪನವರು ನಮ್ಮ ರಾಜ್ಯದಲ್ಲಿ ಇಂತಹ ಒಂದು ಕಾಯಿದೆಯನ್ನು ಮಾಡಿದ್ದರು. ಈಗ ಅಂಬೇಡ್ಕರ್ ಅವರ ಜನ್ಮಶತಾಬ್ಧಿಯನ್ನು ಆಚರಿಸುತ್ತಿರುವ ವರ್ಷದಲ್ಲಿ ಈ ಕಾರ್ಯಕ್ಕಾಗಿ ಅವರನ್ನು ಸಹಿತ ಅಭಿನಂದಿಸಿದರೆ ತಪ್ಪಾಗಲಿಕ್ಕಿಲ್ಲ ಎಂದು ನಾನು ಹೇಳುತ್ತೇನೆ. 1972–73ನೇ ಇಸವಿಯಲ್ಲಿ ನಾನು ಬೆಳಗಾವಿಯಲ್ಲಿ ವಕೀಲಿಕೆ ಮಾಡುತ್ತಿದ್ದೆ. ಆ ಕಾಲಕ್ಕೆ ಕೆಲವು ಮಂದಿ ಭಾರಿಗಿ ಜನರು ನಾವು ಮೊದಲಿನಿಂದಲೂ ಇದನ್ನು ಮಾಡಿಕೊಂಡು ಬಂದಿದ್ದೇವೆ ಎಂದು ಕೋರ್ಟಿನಲ್ಲಿ ದಾವೆ ಮಾಡಿ ಇನ್‌ಜಂಕ್ಷನ್ ಸಹಿತ ಬೆಳಗಾವಿ ಕೋರ್ಟಿನಲ್ಲಿ ತಂದಿದ್ದರು. ಆ ಕಾಲದಲ್ಲಿ ಇದನ್ನು ಧೈರ್ಯದಿಂದ ಎದುರಿಸಿ ಪ್ರಪ್ರಥಮವಾಗಿ ಕರ್ನಾಟಕದಲ್ಲಿ ಇಂತಹ ಒಂದು ಒಳ್ಳೆಯ ಕಾರ್ಯಕ್ರಮ ಮಾಡಿದಂಥ ಕ್ರಾಂತಿವೀರ ಎಂದರೆ ಶ್ರೀ ಬಸವಲಿಂಗಪ್ಪನವರು ಎಂದು ಹೇಳಬಹುದು. ಆದರೆ ಈ ಕ್ರಾಂತಿವೀರರು ಇವತ್ತಿನ ದಿವಸ ಪರಿಸರ ಮಂತ್ರಿಗಳಾದ ನಂತರ ಈ ರಿಹಾಬಿಲಿಟೇಶನ್ ಏರಿಯಾಗಳಾದ ಮಲಪ್ರಭಾ ಹಾಗೂ ಘಟಪ್ರಭಾ ಭಾಗಗಳಲ್ಲಿ ಹೊಸದಾಗಿ ಸೈಟುಗಳನ್ನು ಮಾಡಿದಂಥ ಕಡೆ ಇನ್ನೂ ಕೂಡ ಅಲ್ಲಿ ಅಂಡರ್‌ಗ್ರೌಂಡ್ ವ್ಯವಸ್ಥೆ ಮಾಡಿರುವುದಿಲ್ಲ. ಹೀಗಾಗಿ ಅಲ್ಲಿನ ಜನರು ಇವತ್ತು ಕೂಡ ರಸ್ತೆ ಬದಿಯಲ್ಲಿ ಕೂಡುತ್ತಿದ್ದಾರೆ. ಸೆಕ್ಷನ್ 17ರ ಪ್ರಕಾರ ಅಂಡರ್‌ಗ್ರೌಂಡ್ ಮಾಡಬೇಕೆಂದು ಕಾಯಿದೆ ಇದ್ದರೂ ಸಹಿತ ಇನ್ನುವರೆಗೆ ಈ ಬಗ್ಗೆ ಕಾರ್ಯಕ್ರಮ ಕೈಗೊಂಡಿರುವುದಿಲ್ಲ. ಆದಕಾರಣ ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಾದ ಶ್ರೀ ಬಸವಲಿಂಗಪ್ಪನವರಲ್ಲಿ ನನ್ನ ಕಳಕಳಿ ಏನೆಂದರೆ ಯಾವ್ಯಾವ ರಿಹಾಬಿಲಿಟೇಟೆಡ್ ಏರಿಯಾ ಇದೆ, ಅಲ್ಲಿ ಈ ವ್ಯವಸ್ಥೆಯನ್ನು ಮಾಡಲು ಕೂಡಲೇ ಆದೇಶವನ್ನು ಕೊಡಬೇಕು. ಇದಕ್ಕೆ ಹಿಂದುಮುಂದೆ ನೋಡಬಾರದು. ಏಕೆಂದರೆ ಒಬ್ಬ ಸರ್ಕಾರಿ ಅಧಿಕಾರಿಯನ್ನು ಶಿಕ್ಷಿಸಲಿಕ್ಕೆ ತಮಗೆ ಹೆದರಿಕೆ ಆಗುತ್ತದೆ ಎಂದು ತೋರಿಸಿಕೊಡಬಾರದೆಂದು ಹೇಳಿ ಈ ದಿವಸ ತಂದಂಥ ಈ ನಿರ್ಣಯ ಯೋಗ್ಯ ಇದೆ. ಶ್ರೀ ಬಸವಲಿಂಗಪ್ಪನವರನ್ನು ಇವತ್ತಿನ ದಿವಸ ಮತ್ತೊಮ್ಮೆ ನೆನೆದು ಇದನ್ನು ಸರ್ವಾನುಮತದಿಂದ ಪಾಸ್ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಎಲ್ಲರನ್ನೂ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ) : ಸನ್ಮಾನ್ಯ ಅಧ್ಯಕ್ಷರೇ, ಈಗ ತಂದಿರತಕ್ಕ ನಿರ್ಣಯ ಬಹಳ ಸ್ವಾಗತಾರ್ಹವಾದುದು. ಮನುಷ್ಯರಲ್ಲಿ ಮೇಲುಕೀಳು ಇರತಕ್ಕಂಥ ಈ ಕಾರ್ಯಕ್ರಮ ಹಿಂದಿನಿಂದಲೂ ನಡೆದುಬಂದ ಮಲಹೊರತಕ್ಕ ಕಾರ್ಯಕ್ರಮ. ಇದು ಒಂದು ಪಂಗಡಕ್ಕೇ ಮೀಸಲಾಗಿಟ್ಟುಕೊಂಡು, ಅವರನ್ನು ಜೀತದಾಳುಗಳಿಗಿಂತಲೂ ಕಡೆಯಾಗಿ ರಾಕ್ಷಸ ವೃತ್ತಿಯಿಂದ ನೋಡುತ್ತಿದ್ದ ಕಾಲದಲ್ಲಿ, 1972–73ರಲ್ಲಿ ಕರ್ನಾಟಕದಲ್ಲಿ ಪೌರಾಡಳಿತ ಮಂತ್ರಿಗಳಾದ ಮಾನ್ಯ ಬಸವಲಿಂಗಪ್ಪನವರು ಮಲ ಹೊರತಕ್ಕ ಕೆಲಸವನ್ನು ನಿಲ್ಲಿಸುವುದಕ್ಕೆ ಬಹಳವಾದ ಕಾರ್ಯಕ್ರಮವನ್ನು ಮಾಡಿದರು. ಇದರಲ್ಲಿ, ಅವರು ಶಹಭಾಸ್‌ಗಿರಿಯನ್ನೂ ತೆಗೆದುಕೊಂಡರು. ಆದರೂ, ಅವರನ್ನು ಕೆಲವರು ಟೀಕೆ ಮಾಡಿದಾಗ, ಯಾರನ್ನೂ ಲೆಕ್ಕಕ್ಕೆ ತಾರದೆ ನುಚ್ಚುನೂರು ಮಾಡಿ, ಈ ಕೆಲಸವನ್ನು ಮಾಡಿದರು. ಆ ಬಳಿಕ, ಇನ್ನೂ ಸ್ವಲ್ಪ ಸ್ವಲ್ಪ ನಡೆಯುತ್ತಿರುವುದನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಪೌರಾಡಳಿತ ಮಂತ್ರಿಗಳಾದ ಮಾನ್ಯ ಜಾರ್ಜ್‌ರವರು ನಿರ್ಣಯ ತಂದಿದ್ದಾರೆ. ಏಕೆಂದರೆ, ಮಹಾತ್ಮಗಾಂಧಿಯವರು ಹೇಳಿದ್ದೇನೆಂದರೆ, ಸ್ವಾವಲಂಬನೆ. ಅಂದರೆ, ಅವನವನ ಮಲವನ್ನು ಅವನೇ ತೆಗೆಯಬೇಕೆಂದು ಹೇಳಿದ್ದರು. ಅವರು ವಾರ್ಧಾದಲ್ಲಿರುವಾಗ ಒಂದು ಸಂದರ್ಭದಲ್ಲಿ ಅಲ್ಲಿರತಕ್ಕಂಥ ಜಲ ನೆಲದಲ್ಲಿ, ಮಾರ್ಗದಲ್ಲಿ ಮಲವಿಸರ್ಜನೆ ಮಾಡುತ್ತಿದ್ದರು. ಅದನ್ನು ಒಂದು ವರ್ಷ ನೋಡಿದರು, ಅವರೇ ಬಂದು, ಒಂದು ಹಾರೆ, ಒಂದು ದೊಡ್ಡ ಬುಟ್ಟಿಯನ್ನು ತೆಗೆದುಕೊಂಡು, ಅಲ್ಲಿದ್ದಂಥ ಜನರನ್ನು ಕರೆದುಕೊಂಡು

ಹೋಗಿ, ಯಾರು ಯಾರೋ ಮಾಡಿದಂಥ ಮಲವನ್ನು ಅವರೇ ತೆಗೆದು ಕ್ಲೀನ್ ಮಾಡಿದರಂತೆ. ಊರಿನವರು ಮರುದಿವಸ ಬಂದು ನೋಡಿ, ಮೈದಾನ ಕ್ಲೀನ್ ಆಗಿರುವುದನ್ನು ಕಂಡು, ನೋಡಿದಾಗ ಈ ಕೆಲಸವನ್ನು ಮಹಾತ್ಮ ಗಾಂಧೀಜಿಯವರು ಮಾಡಿದ್ದು ಎಂದು ಹೇಳಿದಮೇಲೆ ಆಲ್ಲಿಯ ಜನರಿಗೆ ಬುದ್ಧಿ ಬಂತು. ಅಂದಿನಿಂದ ಆ ರೀತಿಯಲ್ಲಿ ರಸ್ತೆಯಲ್ಲಿ, ಮಾರ್ಗದಲ್ಲಿ ಮಲವಿಸರ್ಜನೆ ಮಾಡುವುದನ್ನು ನಿಲ್ಲಿಸಿದರಂತೆ. ಅದಕ್ಕೆ, ಹೇಳುವುದೇನೆಂದರೆ, ಈ ಸ್ವಾವಲಂಬನೆಯನ್ನು ನಮಗೆ ಮಹಾತ್ಮ ಗಾಂಧಿಯವರೇ ಹೇಳಿಕೊಟ್ಟಿದ್ದಾರೆ. ಇವತ್ತು ಈ ಒಂದು ಮಲ ಹೊರತಕ್ಕ ಕಾರ್ಯಕ್ರಮವನ್ನು ನಿಲ್ಲಿಸತಕ್ಕ ನಿರ್ಣಯ ಕ್ರಾಂತಿಕಾರಕವಾದ ನಿರ್ಣಯ. ಏಕೆಂದರೆ, ಬಹು ಸಂಖ್ಯೆಯಲ್ಲಿರತಕ್ಕ ಜನರು ಪರಿಶಿಷ್ಟ ಜನಾಂಗದವರು, ಅವರನ್ನು ಬರೀ ಮಲ ಹೊರುವುದಕ್ಕೆ ಮೀಸಲಿಡುವಂಥ ನೀತಿ ಅತ್ಯಂತ ಕರೋರವಾದುದು, ರಾಕ್ಷಸೀಕೃತ್ಯವಾದುದು. ಇದನ್ನು ನಿಲ್ಲಿಸತಕ್ಕ ಈ ಕಾರ್ಯಕ್ರಮ ಅತ್ಯಂತ ಶ್ಲಾಘನೀಯ ಎಂದು ಹೇಳಿ, ಈ ನಿರ್ಣಯವನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗ) : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಈ ಸದನದಲ್ಲಿ ಅಮಾನವೀಯ ಪದ್ಧತಿಯನ್ನು ಕಿತ್ತೊಗೆಯಲು ನಿರ್ಣಯವನ್ನು ತಂದಿದ್ದಾರೆ. ಈ ನಿರ್ಣಯವನ್ನು ನಾನು ಸ್ವಾಗತಿಸುತ್ತೇನೆ. ಇವತ್ತು ನಮ್ಮ ದೇಶದಲ್ಲಿ ನಮ್ಮ ಸಮಾಜದಲ್ಲಿ ಸುಮಾರು ಸಾವಿರಾರು ವರ್ಷಗಳಿಂದ ಈ ಮಲ ಹೊರತಕ್ಕ ಪದ್ಧತಿ ಬೆಳೆದುಕೊಂಡು ಬಂದಿದೆ. ಇದಕ್ಕೆ ಕಾರಣ, ನನಗನಿಸುತ್ತದೆ, ನಮ್ಮ ಹಿಂದೂ ಧರ್ಮ ಏನಿದೆ, ಈ ಹಿಂದೂ ಧರ್ಮದ ವರ್ಣಭೇದ ನೀತಿಯನ್ನು ಕೆಲವು ಜನ ತಿರುಚಿ ಮಾಡಿರುವುದರಿಂದ; ಸಮಾಜದಲ್ಲಿ ಕೆಲವು ವರ್ಗದ ಜನರೇ ಈ ಕೆಲಸವನ್ನು ಮಾಡಬೇಕೆಂದು, ಕೆಲವರ್ಗದ ಜನರಿಗೆ ಮೀಸಲಿಟ್ಟಿದ್ದರು. ಇವತ್ತೂ ವರ್ಣಭೇದ ನೀತಿ ಇದೆ, ಇದರಲ್ಲಿ ಸಂಪೂರ್ಣ ಬದಲಾವಣೆಯಾಗಬೇಕು, ಇದರ ಬಗ್ಗೆ ಸಮಾಜ ಚಿಂತಿಸಬೇಕು. ಕೇವಲ ಕಾನೂನು ಮುಖಾಂತರ ಮಾಡುತ್ತೇವೆಂದು ಹೇಳಿದರೆ ಆಗುವುದಿಲ್ಲ. ಹಿಂದೂ ಧರ್ಮದ ವರ್ಣಭೇದ ನೀತಿಯನ್ನು ಸಂಪೂರ್ಣವಾಗಿ ತೆಗೆದುಹಾಕಬೇಕು. ಹೇಗೆ ಬೈಬಲನ್ನು ಎರಡು ರೀತಿ ಮಾಡಿದರು old testament and new testament ಹಾಗೆ, ಹೊಸ ಬಗವದ್ಗೀತೆಯನ್ನು, ಹಿಂದೂ ಧರ್ಮದ ಸಮಾಜವನ್ನು ಬರೆದರೆ, ಈ ಸಮಾಜದಲ್ಲಿ ಬದಲಾವಣೆಯಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಈ ರೀತಿ ಬೇರೆ ಯಾವುದೇ ಧರ್ಮದಲ್ಲಿ ಇಲ್ಲ. ವರ್ಗೀಕರಣ ಮಾಡಿ, ಕೆಲವು ವರ್ಗಗಳಿಗೆ ಮಾತ್ರ ಈ ಕೆಲಸವನ್ನು ಮೀಸಲಿಟ್ಟಿದ್ದರು. ಈ ಅಮಾನವೀಯ ಪದ್ಧತಿಯನ್ನು ಏನು ಮಾಡಿದ್ದಾರೆ ಇದನ್ನು ಸಮಾಜ ಹಿಂದೂ ಧರ್ಮದ ಮುಖಾಂತರ ಬದಲಾವಣೆ ಮಾಡಿದರೆ ಒಳ್ಳೆಯದೆಂದು ಈ ಸಂದರ್ಭದಲ್ಲಿ ಭಾವಿಸುತ್ತೇನೆ. ಈ ಸಂದರ್ಭದಲ್ಲಿ ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಮಾನ್ಯ ಸಚಿವರಾದ ಬಸವಲಿಂಗಪ್ಪನವರನ್ನು ಎಲ್ಲರೂ ನೆನೆಸಿಕೊಳ್ಳುತ್ತಾರೆ. ಹಿಂದೆ ಎಂತಹ ಕ್ರಾಂತಿಕಾರಿ ವಿಚಾರವನ್ನು ಹೇಳಿದರು, ಮಲ ಹೊರತಕ್ಕ ಪದ್ಧತಿಯ ವಿರುದ್ಧ ಶೋಷಣೆ ವಿರುದ್ಧ ಗಲಾಟೆ ಮಾಡಿದ್ದರು. ನಾನು ಹಲವುಸಾರಿ ಅವರ ಭಾಷಣವನ್ನು ಕೇಳಿದ್ದೇನೆ. ಹಿಂದೂ ಧರ್ಮದ ಬಗ್ಗೆ ಇರತಕ್ಕ ವಿವಿಧ ನ್ಯೂನತೆಗಳ ಬಗ್ಗೆ ಎತ್ತಿ ಹೇಳುತ್ತಿರುತ್ತಾರೆ. ಈ ನ್ಯೂನತೆಗಳು ಸರಿಹೋಗಬೇಕಾದರೆ, ಸಮಾಜದಲ್ಲಿರತಕ್ಕ ಮುಖಂಡರು ಇದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಮಾನ್ಯ ಬಸವಲಿಂಗಪ್ಪನವರ 1972ರ ವಾದ ಏನಿದೆ, ಅದು ಅವತ್ತು ನಿಜ ಅನಿಸುವುದಾದರೆ, ಇನ್ನು 10 ವರ್ಷವಾದರೂ ಅದು ನಿಜ ಎನ್ನಿಸುತ್ತದೆ. ಅದಕ್ಕಾಗಿ ನಾನು ಅವರಿಗೆ ಗೌರವಪೂರ್ವಕವಾಗಿ ಹೇಳುತ್ತೇನೆ. ಅವರು ಇವತ್ತು ಮಾಡಿದ ವಿಚಾರ, ಇವತ್ತು ನಿಜ ಅನಿಸುತ್ತಿದೆ, ಇವತ್ತು ಏನು ಮಾಡುತ್ತಾರೆ, ಅದು ಇನ್ನೂ 10 ವರ್ಷಕ್ಕೆ ನಿಜ ಎನ್ನುವ ಪರಿಸ್ಥಿತಿ ಬರಬಹುದು. ಈ ಶ್ರೇಯಸ್ಸು ತಮಗೆ ಸಲ್ಲುತ್ತದೆಂದು ಭಾವಿಸುತ್ತೇನೆ.

ಇವತ್ತು ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದಕ್ಕೆ ಕಾನೂನು ಪ್ರಕಾರ ಏನು ಬೇಕೋ ಮಾಡಿ, ಆದರೆ ಅದರ ಜೊತೆಗೆ ಸಮಾಜ ಕೂಡಾ ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ಒಂದು ವಿಚಾರ ಸಂಕಿರಣ ಏರ್ಪಡಿಸಿದರೆ ಒಳ್ಳೆಯದು. ಸರಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ಸಮಾಜ ಮುಂದೆ ಬಂದರೆ ಇದರಲ್ಲಿ ಆಸಕ್ತಿ ವಹಿಸಿದರೆ, ಈ ಅನಿಷ್ಟ ಪದ್ಧತಿ ಸಮಾಜದಿಂದ ಕಿತ್ತುಹೋಗುತ್ತದೆ ಎಂದು ನಾನು ಭಾವಿಸುತ್ತೇನೆ. ಇವತ್ತು ನಗರಾಭಿವೃದ್ಧಿ ಸಚಿವರು ಏನು ನಿರ್ಣಯವನ್ನು ತಂದಿದ್ದಾರೆ. ಆ

ನಿರ್ಣಯವನ್ನು ಶ್ಲಾಘನೆ ಮಾಡುತ್ತೇನೆ. ಮತ್ತು ಅದರ ಜೊತೆಗೆ ಮಾನ್ಯ ಬಸವಲಿಂಗಪ್ಪನವರನ್ನೂ ಶ್ಲಾಘನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಒಳ್ಳೆಯ ಕೆಲಸ ಮಾಡುವವರಿಗೆ ನಾವು ಶ್ಲಾಘನೆ ಹೇಳಬೇಕಾಗುತ್ತದೆ.

Sri D.B. Chandre Gowda : Let us decide the time.

Chairman : Do you want lunch break ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಕೃಷ್ಣಾ ಬೇಸಿನ್ ಬಿಲ್ ಇನ್ನೂ ಆಗಬೇಕಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಬೆಳಿಗ್ಗೆ 10 ಘಂಟೆಗೆ ಬಂದಿರುವವರು ನಾವು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅದಕ್ಕೆ ಏನು ಮಾಡುವುದಕ್ಕೆ ಆಗುತ್ತದೆ. ನಾವು ಕುಳಿತುಕೊಂಡು ಬಿಟ್ಟಿದ್ದೇವೆ. ಮುಂಜಾನೆಯಿಂದ ಎರಡೂ ಎರಡೂವರೆ ಘಂಟೆ ಜೀರೋ ಅವರ್ ಮಾಡಿರುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಎಲ್ಲರೂ ಮಾತನಾಡುತ್ತಿದ್ದಾರೆ. ಇದಕ್ಕೆ ಒಂದು ಇತಿಮಿತಿ ಬೇಡವೇ ? ಆಪೊಜಿಷನ್‌ನವರು ವೆಲ್‌ಕಮ್ ಮಾಡುತ್ತೇವೆ. ಬೇರೆ ಬಿಲ್ಸ್ ಇದೆ ಎಂದು ಹೇಳುತ್ತೀರಿ. ಲಂಚ್ ಆದರೂ ಮಾಡಬೇಕಲ್ಲ. 10 ಘಂಟೆಯಿಂದ ಒಂದೇ ಸಮನೆ ಇಲ್ಲಿ ಕುಳಿತಿದ್ದೇವೆ. ಏನಾದರೂ ನಿರ್ಣಯ ತೆಗೆದುಕೊಳ್ಳಬೇಕಲ್ಲ.

ಡಾ। ಎನ್.ಬಿ. ನಂಜಪ್ಪ : ಈ ಒಂದು ನಿರ್ಣಯ ಏನಿದೆ ಇದು ನಿಜವಾಗಿಯೂ ಬಹಳ ಲೇಟ್ ಆಗಿ ಬಂದಿದ್ದರೂ ಕೂಡಾ ಡಾ। ಅಂಬೇಡ್ಕರ್‌ರವರ ಶತಮಾನೋತ್ಸವ ವರ್ಷದಲ್ಲಿ, ಇಂಡಿಯಾ ದೇಶದ ಎಲ್ಲಾಕಡೆ ಇದನ್ನು ಮಾಡಬೇಕೆಂದು ಬಂದಿದೆ ಕರ್ನಾಟಕ ರಾಜ್ಯದಲ್ಲಿ ಬಸವಲಿಂಗಪ್ಪನವರ ನೇತೃತ್ವದಲ್ಲಿ ಹೊರಟಿಂಥ ವಿಚಾರಧಾರೆ ಇವತ್ತು ಎಲ್ಲಾಕಡೆ ಬಂದಿರತಕ್ಕಂಥಾದ್ದು ನಿಜಕ್ಕೂ ಕೂಡಾ ಸಂತೋಷಪಡತಕ್ಕಂಥ ವಿಚಾರ. ಈ ಚತುರ್ವರ್ಣ ಹಿಂದೂ ಧರ್ಮದ ನೆರಳಿನಲ್ಲಿ ಬಂದಂಥ ಈ ಒಂದು ಕವಲು, ಈ ಒಂದು ವೃತ್ತಿ, ವೃತ್ತಿಗೆ ಒಂದು ಜಾತಿ ಮಾಡಿ ಆ ವೃತ್ತಿ ಇಂಥವರಿಗೇ ಸೇರಿದ್ದು ಎಂಬುದನ್ನು, ಹಿಂದೂ ಧರ್ಮದ ನೆರಳಿನಲ್ಲಿ ಈ ಒಂದು ಅನಿಷ್ಟ ಸ್ಪಷ್ಟ ಪದ್ಧತಿಯನ್ನು ಯಾರು ಬೆಳೆಸಿಕೊಂಡು ಬಂದರೋ ಅದು ಕೊನೆ ಆಗತಕ್ಕಂಥ ದಿಸೆಯಲ್ಲಿ ಇದು ಮೊದಲನೇ ಹೆಜ್ಜೆ ಎಂದರೆ ತಪ್ಪಾಗಲಾರದು. ಇನ್ನೂ ಅನೇಕ ಇವೆ, ಅವೆಲ್ಲವನ್ನೂ ಕೂಡಾ ಕೊನೆಗಾಣಿಸತಕ್ಕ ದಿವಸ ಈ ದೇಶದಲ್ಲಿ ಬೇಗ ಬರಲಿ ಹಿಂದೂ ಎಂಬುದು ಒಂದೇ ಒಂದು ಧರ್ಮ, ಅದರಲ್ಲಿರತಕ್ಕಂಥವರೆಲ್ಲರೂ ಕೂಡಾ ಈ ಒಂದು ಧರ್ಮಕ್ಕೆ ಸೇರಿದವರು, ಅದರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಜಾಗ ಎಂಬುದು ಈ ದೇಶದಲ್ಲಿ ತೊಳೆದು ಹೋಗಲಿ ಎಂದು ಈ ಸಂದರ್ಭದಲ್ಲಿ ಹೇಳಿ, ನಿಜವಾಗಿಯೂ ಮಾನ್ಯ ಬಸವಲಿಂಗಪ್ಪನವರಿಗೆ ದೇವರು ಜ್ಞಾನವನ್ನು ಕೊಟ್ಟು ಇದರ ಬಗ್ಗೆ ಚಿಂತನೆ ಮಾಡತಕ್ಕ, ಇದನ್ನು ಕಾರ್ಯರೂಪಕ್ಕೆ ತರತಕ್ಕಂಥ ದಿಸೆಯಲ್ಲಿ ಬಹಳ ಹಿಂದೆ ಹೊರಟಿದ್ದು ಒಳ್ಳೆಯದು, ಈ ಕೆಟ್ಟ ಚಾಳಿ ತೊಲಗತಕ್ಕಂಥ ಒಂದು ದಿವಸ ಬಂದಿದೆ, ಇನ್ನೂ ಅನೇಕ ಕೆಟ್ಟವೃತ್ತಿಗಳು ನಮ್ಮ ದೇಶದಲ್ಲಿ ಧರ್ಮದ ಹೆಸರಿನಲ್ಲಿ ಜಾತಿಯ ಹೆಸರಿನಲ್ಲಿ ನಡೆಯತಕ್ಕದ್ದು ಕೊನೆಗಾಣಲಿ, ಈ ದೇಶದಲ್ಲಿ ನಾವೆಲ್ಲರೂ ಕೂಡಾ ಒಂದೇ, ಮನುಷ್ಯ ಯಾವ ವೃತ್ತಿ ಮಾಡಿದರೂ, ಮನುಷ್ಯ ಮನುಷ್ಯನೇ, ನಾವೆಲ್ಲಾ ಒಂದೇ ಧರ್ಮಕ್ಕೆ ಸೇರಿದವರು ಎಂಬ ವಿಚಾರಧಾರೆ ಈ ದೇಶದಲ್ಲಿ ಬರಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಚೇರ್ಮನ್ : ಈಗ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಿನಿಸ್ಟರ್‌ರವರ ಪರವಾಗಿ ಬಸವಲಿಂಗಪ್ಪನವರು ಮಾತನಾಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಬಿಲ್ ಇಂಟ್ರಡ್ಯೂಸ್ ಮಾಡುವಾಗ ಮಾಡಬೇಕಾಗಿತ್ತಲ್ಲ.

Charman : I have permitted.

ಪರ್ಮಿಷನ್ ತೆಗೆದುಕೊಂಡಿದ್ದಾರೆ, ಆದುದರಿಂದ ಮಾಡಬಹುದು.

+ ಶ್ರೀ ಬಿ. ಬಸವಲಿಂಗಪ್ಪ (ತಂತ್ರಜ್ಞಾನ ಮತ್ತು ಪರಿಸರಖಾತೆ) :– ಮಾನ್ಯ ಅಧ್ಯಕ್ಷರೇ, ನನ್ನ ಮಿತ್ರರಾದ ನಗರಾಭಿವೃದ್ಧಿ ಮಂತ್ರಿಗಳಾಗಿರತಕ್ಕಂಥ ಕೆ.ಜೆ. ಜಾರ್ಜ್‌ರವರು ಈ ಒಂದು ಮಹತ್ತರವಾಗಿರತಕ್ಕಂಥ ಅರ್ಥಗರ್ಭಿತವಾಗಿರತಕ್ಕಂಥ ಮತ್ತು ದೇಶಕ್ಕೆ ಅನುಕೂಲವಾಗಿರತಕ್ಕಂಥ ಒಂದು ನಿರ್ಣಯವನ್ನು ತಂದಿದ್ದಾರೆ. ಈ ಸದನ ಸರ್ವಾನುಮತದಿಂದ ಅದನ್ನು ಒಪ್ಪಿದೆ.

ಮೊಟ್ಟಮೊದಲನೆಯದಾಗಿ ಒಂದು ಮಾತು ನಾನು ಹೇಳಬೇಕು. ನಾವು ಮಾಡಿದ ಕೆಲಸ 1973ರಲ್ಲಿ ಈ ಮಲ ಹೊರುವುದನ್ನು ನಿಷೇಧ ಮಾಡಿದ್ದೆವು. ಆ ಕಾರ್ಯಕ್ಕೆ ಮಾನ್ಯ ಸದಸ್ಯರಾದ ಶ್ರೀಮಾನ್ ಚಂದ್ರೇಗೌಡ್ರು, ಶ್ರೀಮಾನ್ ಈಶ್ವರಪ್ಪನವರು, ಶ್ರೀಮಾನ್ ವಾಟಾಳ್‌ನಾಗರಾಜ್‌ರವರು, ಶ್ರೀಮಾನ್ ಕೌಜಲಗಿಯವರು, ಶ್ರೀಮಾನ್ ಇದಿನಬ್ಬನವರು, ಶ್ರೀಮಾನ್ ರಾಯರೆಡ್ಡಿಯವರು ಮತ್ತೆ ಡಾಕ್ಟರ್ ನಂಜಪ್ಪನವರು ಬಾಯಿ ತುಂಬಾ ಹೊಗಳಿದ್ದಾರೆ. ಅಂದು ನಾನು ಮಾಡಿದ ಕೆಲಸಕ್ಕೆ ಆ ಒಂದು ಸೇವೆಗೆ ಈ ರಾಜ್ಯಕ್ಕೆ ಮಾಡಿದಂತಹ ಸೇವೆಗೆ ಆ ಒಂದು ಒಳ್ಳೆಯ ಕಾರ್ಯಕ್ಕೆ ಒಳ್ಳೆಯ ಮಾತನ್ನು ಆಡಿದ್ದಾರೆ ಆದಕ್ಕೆ ನಾನು ಆ ಸದಸ್ಯರಿಗೆ ತಲೆಬಾಗಿ ನಮಸ್ಕಾರ ಮಾಡುತ್ತೇನೆ. ನಾವು ಒಳ್ಳೆಯ ಕೆಲಸ ಮಾಡುವಾಗ, ಯಾರು ಅದಕ್ಕೆ ಮನ್ನಣೆ ನೀಡುವುದಿಲ್ಲ. ಅಂತಹ ಒಳ್ಳೆಯ ಕೆಲಸ ಮಾಡುವಾಗ ಬೇಕಾದಷ್ಟು ವಿರೋಧ ಬರುತ್ತದೆ. ಸಾರ್ವಜನಿಕರಿಗೆ ಅನುಕೂಲವಾಗಿರುವಾಗ ವಿರೋಧವನ್ನು ನಾವು ಮೆಟ್ಟಿ ಆ ಕೆಲಸ ಮಾಡಬೇಕಾಗುತ್ತದೆ. ಒಳ್ಳೆಯ ಕೆಲಸ ಮಾಡಿದರೆ ಅದಕ್ಕೆ ತಾವೆಲ್ಲರೂ ವಿಶ್ವಾಸದಿಂದ ನನ್ನ ಸೇವೆಯನ್ನು ಗಮನಿಸಿ ಜ್ಞಾಪಕ ಮಾಡಿಕೊಂಡಿದ್ದೀರಿ. ಅದಕ್ಕೆ ನಾನು ತಮಗೆಲ್ಲರಿಗೂ ಋಣಿಯಾಗಿದ್ದೇನೆ. ನಾನು ಆ ಕೆಲಸ ಮಾಡಿದ ಮೇಲೆ ಅಂದು ನಮ್ಮ ದೇಶದ ಮಹಾತಾಯಿ ಆಗಿರತಕ್ಕಂಥ ಶ್ರೀಮತಿ ಇಂದಿರಾಗಾಂಧಿ ಜೊತೆ ಇದನ್ನು ಮಾತನಾಡಿದೆ. ಆಗ ಅವರು ಪ್ರಧಾನಮಂತ್ರಿಗಳಾಗಿದ್ದರು. ಅಮ್ಮ ನಾನು ಕರ್ನಾಟಕ ರಾಜ್ಯದಲ್ಲಿ ಈ ಕೆಲಸ ಮಾಡಿದ್ದೇನೆ. ಅದನ್ನು ದೇಶದಲ್ಲೆಲ್ಲಾ ವಿಸ್ತಾರ ಮಾಡತಕ್ಕಂಥ ಕೆಲಸ ತಾವು ಮಾಡಿ ಎಂದು ಹೇಳಿದ ಆಗ ಅವರು ನೋಡಿ ಆಶ್ಚರ್ಯಪಟ್ಟರು ಒಂದು ಮಾತು ಹೇಳಿದರು. "Basavalingappaji, how can we do throughout the country? Is it possible to do? How much money is required? It is not possible to do." Then I said, madam, you may say so many things but I want to tell you one thing. This requires the political will of a person who is in power, in authority. You have the political will. This will go." "Then, how much you have spent in Karnataka"? "I have spent nothing. The political will to end this kind of practice, abominable practice, that we have done it. I have not spent any money." I also said," if you value human dignity here, you have to take a decision."ಎಂದು ಹೇಳಿದರೂ ಅವರು ತೆಗೆದುಕೊಳ್ಳಲಿಲ್ಲ. ಇವತ್ತು ಮಾನ್ಯ ಪಿ.ವಿ ನರಸಿಂಹರಾಯರು ಈ ಬಗ್ಗೆ ಗಮನ ಕೊಟ್ಟು ಇವತ್ತಿನದಿವಸ ಇಂತಹ ಒಂದು ದಿಟ್ಟ ಹೆಜ್ಜೆ ಇಟ್ಟಿದ್ದಾರೆ. ಈ ನಮ್ಮ ಸಮಾಜದಲ್ಲಿ ಏನು ಅನಿಷ್ಠ ಪದ್ಧತಿ ಇದೆ. ಅದನ್ನು ಕೊನೆ ಮಾಡಬೇಕೆಂದು ಮಾಡಿದ್ದಾರೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದು ಆಗಬೇಕು, ಇದು ಬಹಳ ದಿವಸಗಳ ಹಿಂದೆಯೇ ಆಗಬೇಕಾಗಿತ್ತು. ನಾನು ಇಲ್ಲಿ ಪ್ರಾರಂಭ ಮಾಡಿದಾಗ ಉಡುಪಿಯಲ್ಲಿ ಶ್ರೀಮಾನ್ ಆಚಾರ್ಯರು ಅಧ್ಯಕ್ಷರಾಗಿದ್ದರು. ಆಮೇಲೆ ಮಂಗಳೂರಿನಲ್ಲಿ ಬ್ಲೇಸಿಸ್ ಡಿಸೌಜರವರು ಅಧ್ಯಕ್ಷರಾಗಿದ್ದರು. ಅವರೆಲ್ಲಾ ರಾತ್ರಿ ಹಗಲು ನಾನು ಹೇಳಿದ ಕೆಲಸವನ್ನು ಮಾಡಿ ಕೊನೆ ಮಾಡುವುದಕ್ಕೆ ಸರ್ವ ಪ್ರಯತ್ನ ಮಾಡಿ, ಈ ಅನಿಷ್ಠ ಪದ್ಧತಿಯನ್ನುಕೊನೆ ಮಾಡಿದರು. ಏಕೆಂದರೆ ನಾನು ಆವತ್ತು ಅವರಿಗೆ ಅಭಿನಂದನೆ ಸಲ್ಲಿಸಲು ಆಗಲಿಲ್ಲ ಇವತ್ತು ನಾನು ಅವರಿಗೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಅದೇ ರೀತಿ ಎಲ್ಲಾ ಕಡೆಗೆ ಕೂಡ ಮಾಡಿದ್ದಾರೆ. ಎಲ್ಲಾ ಮುನಿಸಿಪಾಲಿಟಿಗಳಲ್ಲಿ ಎಲ್ಲಾ ಅಧ್ಯಕ್ಷರುಗಳು ಮಾಡಿದ್ದಾರೆ. ನಾನು ಅವರಿಗೆ ಅಭಿನಂದನೆಗಳನ್ನು ತಿಳಿಸುತ್ತೇನೆ. ಇವತ್ತು ಶ್ರೀಮಾನ್ ನಂಜಪ್ಪನವರು ಚತುರ್ವರ್ಣದ ಬಗ್ಗೆ ಒಂದು ಮಾತು ಆಡಿದ್ದಾರೆ. ನಾನು ಹೆಚ್ಚು ಮಾತನಾಡುವುದಿಲ್ಲ. ಚಾತುರ್ವರ್ಣ ಈಗ ಇದೆಯೋ? ಆ ಕಾಲದಲ್ಲಿ 4 ವರ್ಣಗಳು ಇದ್ದವು, ಅವು ಈಗ ಇಲ್ಲ. ಈಗ ಇರುವುದು ಸುಮಾರು 3 ವರ್ಣಗಳು. 4 ವರ್ಣ ಇದ್ದದ್ದು, ಜಾತಿ ಇಲ್ಲವೇ ಇಲ್ಲ. ಅವೆಲ್ಲಾ ಈಗ ಅಳಿದು ಹೋಗಿಬಿಟ್ಟಿವೆ. ಈಗ ಇರುವುದು 3 ವರ್ಣಗಳು. ಆ ಜಾತಿಗಳು ಜಾತಿಗಳಾಗಿಯೇ ಉಳಿದುಕೊಂಡಿವೆ. ಅವರೇ ಹಿಂದೂಗಳು. ನಾವೆಲ್ಲ ನೀವಲ್ಲ. ಅವರೂ ಅಲ್ಲ. ಆ ಕಾಲ ಬರಲಿ. ಬಹಳ ಶೀಘ್ರವಾಗಿ ಬರಲಿ ಅಂತ ಹಾರೈಸುತ್ತೇನೆ. ಯಾರು ಹಿಂದೂಗಳು ಇದ್ದಾರೆ, ಯಾರು ಹಿಂದೂಗಳಿಲ್ಲ ಎನ್ನತಕ್ಕಂಥ ಒಂದು ವಿಚಾರ

ಈ ದೇಶದಲ್ಲಿ ಪ್ರಾರಂಭ ಆದರೆ ನನಗಂತೂ ಬಹಳ ಸಂತೋಷ. ಈ ಒಂದು ನಿರ್ಣಯವನ್ನು ತಂದ ನಂತರವಾದರೂ ತೆಗೆಯಲಿಕ್ಕೆ ಒಂದು ಅವಕಾಶವಾಗುತ್ತದೆ ಅಂತ ಹೇಳಿ ಈ ನಿರ್ಣಯವನ್ನು ಈ ಸಭೆ ಸರ್ವಾನುಮತದಿಂದ ಒಪ್ಪಬೇಕು ಹಾಗೆ ಅಂತ ಹೇಳಿ ನಾನು ನನ್ನ ಎರಡು ಮಾತನ್ನು ಮುಗಿಸುತ್ತೇನೆ.

"WHEREAS it has been enshring in the proamble too the Constitution of India ascuring the dignity of the individual;

AND WHEREAS Article 47 of the Constitution or India enshrines that the State shall raise the standard of living of its people and the improvement of public health as among its, primary duties;

WHEREAS the dehumanising practice of manual seavenging of night soil still continues in many parts of the country;

AND WHEREAS the municipal bye-laws by themselves as a measure for entire conversion of dry latrines and construction of new pour flush latrines and prevention of further dry latrines in houseHlods are not stringent enough and do not provide any compulsion on house owners to eliminate this practice;

AND WHEREAS it is necessary to enact a uniform legislation throughout the country for abolishing manual seavenging by declaring employment of manual seavenging for any night soil an offence; and making it an offence for not individual or organisation to engage another individual for carrying the night soil and thereby ban the further proliferation of dry latrine in the country;

AND WHEREAS it is desirable for eliminating this dehumanising practice to make it obligatory for house owners to convert dry latrines into pour flush latrines or, as the case may be, to construct new such latrines in the new contrauction;

AND WHEREAS it is necessary that this shameful practice is abolished throughout the country in a time bound period.

AND WHEREAS the subject matter of such law is relatable to entry 6 List it (State List) of the Seventh Schedule to the Constitution of India and Parliament has no power to make laws for the States with respect to the aforesaid matters except as provided in Article 249 and 255 of the Constitution of India;

AND WHEREAS it appears to this degislative Assembly to be desirable that the aforesaid matter should be regulated in the State of Karnataka by Parliament by law;

NOW, THEREFORS, in excercise of the powers conferred by clause (1) of Article 252 of the Constitution of India, this House hereby resolves that the matter of making employment of manual scavenger for removal of night soil, as punishable offence from a date to be specified by the State Government and all matters connected herewith ancillary and incidental thereto should be regulated in the State of Karnataka by parliament by Law'.

ಪ್ರಸ್ತಾವವು ಸರ್ವಾನುಮತದಿಂದ ಅಂಗೀಕೃತವಾಯಿತು.